# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್ — *ಮಧ್ಯ ಕರ್ನಾಟಕದ ಆಪ್ತ ಒಡನಾಡಿ*

ದಾವಣಗೆರೆ, ಸೋಮವಾರ, ಜನವರಿ 27, 2025, ಸಂಪುಟ : 51 ಸಂಚಿಕೆ : 255 ☎ 08192-254736 91642 99999

RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಅಶೋಕ ಚಿತ್ರ ಮಂದಿರದ ಬಳಿ ಪರ್ಯಾಯ ರಸ್ತೆ



ದಾವಣಗೆರೆ, ಜ.26- ನಗರದ ಅಶೋಕ ಚಿತ್ರ ಮಂದಿರದ ಬಳಿ ಈಗಾಗಲೇ ನಿರ್ಮಾಣವಾಗಿರುವ ಅವೈಜ್ಞಾನಿಕ ಕೆಳ ಸೇತುವೆಯಿಂದ ಸಂಚಾರಕ್ಕೆ ತೊಂದರೆಯಾಗಿದ್ದು, ಪರ್ಯಾಯ ರಸ್ತೆ ನಿರ್ಮಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಇಂದಿಲ್ಲಿ ಜಿಲ್ಲಾಡಳಿತದ ಗಣರಾಜ್ಯೋತ್ಸವ ಕಾರ್ಯಕ್ರಮದ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪರ್ಯಾಯ ರಸ್ತೆ ನಿರ್ಮಾಣಕ್ಕೆ ಸುಮಾರು ಎಂಟು ಜನ ಭೂ ಮಾಲೀಕರಿಂದ ಭೂಮಿ ಖರೀದಿಸಿ, 27 ಕೋಟಿ ರೂ. ಪರಿಹಾರ ನೀಡಲಾಗಿದೆ ಎಂದರು.

ಜಲಸಿರಿ ಯೋಜನೆ ವಿಳಂಬ ಕುರಿತ ಮಾತನಾಡಿದ ಸಚಿವರು, ಇದು ಅತ್ಯುತ್ತಮ ಯೋಜನೆಯಾಗಿದ್ದು, ಹಂತ ಹಂತವಾಗಿ ಎಲ್ಲವೂ ಸರಿಯಾಗಲಿದೆ ಎಂದರು.

ಈ ಯೋಜನೆಯಡಿ ಓವರ್ ಹೆಡ್ ಟ್ಯಾಂಕ್, ಹರಿಹರದ ಬಳಿ ತುಂಗಭದ್ರಾ ನದಿ ಬ್ಯಾರೇಜ್, ಪೈಪ್ ಲೈನ್ ಸೇರಿದಂತೆ ಇನ್ನೂ ಹಲವು ಕಾಮಗಾರಿಗಳು ನಡೆಯುತ್ತಿವೆ ಎಂದರು.


ಮಿನಿ ವಿಧಾನಸೌದ ಉದ್ಘಾಟನೆ ಆಗಿಲ್ಲ ಎಂಬ ಪ್ರಶ್ನೆಗೆ, ದಾವಣಗೆರೆ ತಹಶೀಲ್ದಾರ್ ಕಚೇರಿ ಕಟ್ಟಡದಲ್ಲಿ ಸರ್ವೇ ಇಲಾಖೆ, ಉಪ ವಿಭಾಗಾಧಿಕಾರಿ, ಸಬ್ ರಿಜಿಸ್ಟರ್ ಕಚೇರಿ ಒಂದೇ ಕಡೆ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆ ಕಲ್ಪಿಸಬೇಕು ಎಂಬ ಉದ್ದೇಶ (2ನೇ ಪುಟಕ್ಕೆ)

### ವಿಶ್ವ ಕನ್ನಡ ಸಮ್ಮೇಳನ ನಡೆಸಲು ಬದ್ಧ : ಎಸ್ಸೆಸ್ಸೆಂ

ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ನಡೆಸಲು ಬದ್ಧರಾಗಿರುವುದಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದಾಗಿ ಘೋಷಿಸಿ ಬಜೆಟ್‌ನಲ್ಲಿ 30 ಕೋಟಿ ರೂ. ಮೀಸಲಿಡಲಾಗಿತ್ತು.

ಆದರೆ ಕಾರಣಾಂತರಗಳಿಂದ ಸಮ್ಮೇಳನ ನಡೆಯಲಿಲ್ಲ. ಈಗ ಮತ್ತೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿದ್ದಾರೆ. ಈ ಅವಧಿಯಲ್ಲೇ ವಿಶ್ವ ಕನ್ನಡ ಸಮ್ಮೇಳನ ನಡೆಸಲು (2ನೇ ಪುಟಕ್ಕೆ)

### ಹಳೆ ವಾಹನಗಳ ಗುಜರಿಗೆ ಇನ್ನಷ್ಟು ಉತ್ತೇಜನಕ್ಕೆ ಪ್ರಸ್ತಾಪ



ನವದೆಹಲಿ, ಜ. 26- ಮಾಲಿನ್ಯಕಾರಕವಾದ ಹಳೆಯ ವಾಹನಗಳನ್ನು ಕೈಬಿಡಲು ಇನ್ನಷ್ಟು ಉತ್ತೇಜನ ನೀಡಲು ಕೇಂದ್ರ ಸಾರಿಗೆ ಇಲಾಖೆ ಪ್ರಸ್ತಾಪಿಸಿದೆ. ಬಿಎಸ್-2 ಹಾಗೂ ಹಳೆಯ ಮಾನದಂಡಗಳ ವಾಹನ ವನ್ನು ಕೈಬಿಟ್ಟರೆ ಒಂದು ಬಾರಿಗೆ ಶೇಕಡ 50ರಷ್ಟು ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸಲಾಗಿದೆ. ಪ್ರಸಕ್ತ ಮೋಟಾರು ವಾಹನ ಕಾಯ್ದೆಯಡಿ ಶೇಕಡಾ 25 ರಷ್ಟು ತೆರಿಗೆ ವಿನಾಯಿತಿ ನೀಡಲಾಗುತ್ತಿದೆ. ವಾಣಿಜ್ಯ ವಾಹನಗಳಿಗೆ ವಿನಾಯಿತಿ ಶೇಕಡಾ 15 ರಷ್ಟಿದೆ.

## ಆವರಗೆರೆ ಶ್ರೀಮತಿ ಬೇತೂರು ಶಿವಗಂಗಮ್ಮ ನಿಧನ



ದಾವಣಗೆರೆ ಸಿಟಿ ಆವರಗೆರೆ ವಾಸಿ,
ನಗರಸಭಾ ಮಾಜಿ ಉಪಾಧ್ಯಕ್ಷರಾದ
ಶ್ರೀ ಹೆಚ್.ಕೆ. ನಾಗೇಂದ್ರಪ್ಪನವರ ಧರ್ಮಪತ್ನಿ
**ಶ್ರೀಮತಿ ಬೇತೂರು ಶಿವಗಂಗಮ್ಮ**
ಅವರು ದಿನಾಂಕ 26-01-2025ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27-01-2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಆವರಗೆರೆಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು
ಮೊ. : 99648 29155, 74068 03244

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ಶಾಮನೂರು ಶಿವ - ಪಾರ್ವತಿ ಬಡಾವಣೆ, 2ನೇ ಮೇನ್, 2ನೇ ಕ್ರಾಸ್ ವಾಸಿ
**ಬಿಂದಪ್ಪ ಶ್ರೀಮತಿ ಸರ್ವಮಂಗಳಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.



ಜನನ : 1-6-1945 ಮರಣ : 23-1-2025

ದಿನಾಂಕ 23.01.2025ನೇ ಗುರುವಾರ ಮಧ್ಯಾಹ್ನ 3.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಬಿಂದಪ್ಪ ಚಿದಾನಂದಪ್ಪನವರು**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 27.01.2025ನೇ ಸೋಮವಾರ ಬೆಳಿಗ್ಗೆ 10.30ಕ್ಕೆ
ಶಾಮನೂರಿನ ಶಿವ - ಪಾರ್ವತಿ ಬಡಾವಣೆ, ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ**

- ಬಿಂದಪ್ಪ ಶ್ರೀಮತಿ ಸುನೀತ ಮತ್ತು ಬಸವರಾಜಪ್ಪ ಬಿ.ಸಿ. (ರಾಜು) ಮತ್ತು ಮಕ್ಕಳು.
- ಬಿಂದಪ್ಪ ಶ್ರೀಮತಿ ಅಶ್ವಿನಿ ಮತ್ತು ಶ್ರೀ ಲಿಂಗರಾಜ್ ಬಿ.ಸಿ. ಮತ್ತು ಮಕ್ಕಳು
- ಬಿಂದಪ್ಪ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.

ಮೊ. 94800-24202, 97436-73901

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಅಗಸನಕಟ್ಟೆ ಎಸ್. ಶಿವಮೂರ್ತಿ (ಮಾಜಿ ಪ್ರಧಾನರು) ಅವರ ಮಾತೋಶ್ರೀ

# ಶತಾಯುಷಿ ಶಿವಪ್ಪರ ಶ್ರೀಮತಿ ಬಸಮ್ಮ ನಿಧನ

ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ವಾಸಿ ದಿ. ಸಿದ್ದಲಿಂಗಪ್ಪನವರ ಧರ್ಮಪತ್ನಿ
**ಶತಾಯುಷಿ ಶ್ರೀಮತಿ ಬಸಮ್ಮನವರು**
ದಿನಾಂಕ 26.1.2025ರ ಭಾನುವಾರ ರಾತ್ರಿ 8.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 101 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಆರು ಜನ ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಗಿರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.1.2025ರ ಸೋಮವಾರ ಮಧ್ಯಾಹ್ನ 12.30ಕ್ಕೆ ಅಗಸನಕಟ್ಟೆಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.



**ದುಃಖತಪ್ತ ಕುಟುಂಬ ವರ್ಗ**

- ಶ್ರೀಮತಿ ದ್ರಾಕ್ಷಾಯಣಮ್ಮ ಮತ್ತು ಶ್ರೀ ಎಸ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಅಗಸಕಟ್ಟೆ
- ಶ್ರೀಮತಿ ಪಾರ್ವತಮ್ಮ, ಶ್ರೀ ಎಸ್. ಶಿವಮೂರ್ತಿ (ಮಾಜಿ ಪ್ರಧಾನರು) ಮತ್ತು ಮಕ್ಕಳು, ಅಗಸನಕಟ್ಟೆ
- ಶ್ರೀಮತಿ ಗಂಗಮ್ಮ ಎ.ಎಸ್. ಬಸಪ್ಪನವರ ಮಕ್ಕಳು, ಅಗಸನಕಟ್ಟೆ
- ಶ್ರೀಮತಿ ಗುರುಸಿದ್ದಮ್ಮ ಕೆ.ಬಿ. ಸಿದ್ದಬಸಪ್ಪನವರ ಮಕ್ಕಳು, ಬೆಳವನೂರು
- ಶ್ರೀಮತಿ ಅನುಸೂಯಮ್ಮ ಚಂದ್ರಪ್ಪನವರ ಮಕ್ಕಳು, ಸೀಗೆಹಳ್ಳಿ
- ಶ್ರೀಮತಿ ಚನ್ನಬಸಮ್ಮ ಮತ್ತು ಶ್ರೀ ಕೆ.ಎಂ. ವಿಶ್ವನಾಥ ಮತ್ತು ಮಕ್ಕಳು, ಬಿ.ಕಲಪನಹಳ್ಳಿ
- ಶ್ರೀಮತಿ ಶಾರದಮ್ಮ ಸಿದ್ದಬಸಪ್ಪನವರ ಮಕ್ಕಳು, ಆನಗೋಡು
- ಶ್ರೀಮತಿ ಪಾರ್ವತಮ್ಮ, ಶ್ರೀ ಪರಮೇಶ್ವರಪ್ಪ ಮತ್ತು ಮಕ್ಕಳು, ಈಚಘಟ್ಟ
- ಶ್ರೀಮತಿ ನಾಗರತ್ನಮ್ಮ ಶ್ರೀ ಎನ್. ಬಿಷ್ಣನಗೌಡ್ರು ಮತ್ತು ಮಕ್ಕಳು, ಬಳಿಗಾನೂರು
- ಶಿವಪ್ಪರ ವಂಶಸ್ಥರು, ಬಂಧು-ಮಿತ್ರರು, ಅಗಸನಕಟ್ಟೆ ಗ್ರಾಮಸ್ಥರು.

**ಶ್ರೀ ನಂದಿ ಆಗ್ರೋ ಸೀಡ್ಸ್ ಕಾರ್ಪೊರೇಷನ್**
ಎಪಿಎಂಸಿ ಯಾರ್ಡ್
'ಎ' ಬ್ಲಾಕ್, ದಾವಣಗೆರೆ.

**ಶ್ರೀ ವೆಂಕಟೇಶ್ವರ ಆಗ್ರೋ ಏಜೆನ್ಸೀಸ್**
ಎಪಿಎಂಸಿ ಯಾರ್ಡ್
'ಎ' ಬ್ಲಾಕ್, ದಾವಣಗೆರೆ.

**ಶ್ರೀ ಗುರುಬಸವ ಆಗ್ರೋ ಏಜೆನ್ಸೀಸ್**
ಎನ್.ಆರ್. ರೋಡ್
ದಾವಣಗೆರೆ.

ಮೊಬೈಲ್ : 94481-14352 70229-55678 91086-20568





ಭಾನುವಾರ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಲ್ ಇಕ್ರಾ ಶಾಲೆ, ಡಿ.ಆರ್.ಆರ್ ಶಾಲೆ, ಸೆಂಟ್ ಜಾನ್ಸ್ ಪ್ರೌಢಶಾಲೆಯ ಮಕ್ಕಳು ದೇಶಪ್ರೇಮ, ತ್ಯಾಗ, ಬಲಿದಾನದ ಸಾರವನ್ನು ಹೊಂದಿದಂತಹ ನೃತ್ಯರೂಪಕಗಳನ್ನು ಪ್ರದರ್ಶಿಸಿದರು.

# ಅಶೋಕ ಚಿತ್ರ ಮಂದಿರದ ಬಳಿ ಪರ್ಯಾಯ ರಸ್ತೆ

(1ನೇ ಪುಟದಿಂದ) ಸಚಿವರು, ಇದು ಅತ್ಯುತ್ತಮ ಯೋಜನೆ ಯಾಗಿದ್ದು, ಹಂತ ಹಂತವಾಗಿ ಎಲ್ಲವೂ ಸರಿಯಾಗಲಿದೆ ಎಂದರು.

ಈ ಯೋಜನೆಯಡಿ ಓವರ್ ಹೆಡ್ ಟ್ಯಾಂಕ್, ಹರಿಹರದ ಬಳಿ ತುಂಗಭದ್ರಾ ನದಿ ಬ್ಯಾರೇಜ್, ಪೈಪ್ ಲೈನ್ ಸೇರಿದಂತೆ ಇನ್ನೂ ಹಲವು ಕಾಮಗಾರಿಗಳು ನಡೆಯುತ್ತಿವೆ ಎಂದರು.

ಮಿನಿ ವಿಧಾನಸೌದ ಉದ್ಘಾಟನೆ ಆಗಿಲ್ಲ ಎಂಬ ಪ್ರಶ್ನೆಗೆ, ದಾವಣಗೆರೆ ತಹಶೀಲ್ದಾರ್ ಕಚೇರಿ ಕಟ್ಟಡದಲ್ಲಿ ಸರ್ವೇ ಇಲಾಖೆ, ಉಪ ವಿಭಾಗಾಧಿಕಾರಿ, ಸಬ್ ರಿಜಿಸ್ಟರ್ ಕಚೇರಿ ಒಂದೇ ಕಡೆ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆ ಕಲ್ಪಿಸಬೇಕು ಎಂಬ ಉದ್ದೇಶ ಹೊಂದಲಾಗಿದೆ. ಕಾಮಗಾರಿಗೆ 13 ಕೋಟಿ ರೂ. ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಜಿಲ್ಲೆಯ ಪ್ರವಾಸಿ ತಾಣಗಳಾದ ಸೂಳೆಕೆರೆ, ಕೊಂಡುಕುರಿ, ಹರಿಹರ, ಸಂತೇಬೆನ್ನೂರು, ತೀರ್ಥರಾಮೇಶ್ವರ ಇತರೆ ಸ್ಥಳಿಗಳಿಗೆ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲು ಕ್ರಮ ಕೈಗೊಳ್ಳಲಾಗುತ್ತಿದೆ. ಮಾ.8ರ ಮಹಿಳಾ ದಿನಾಚರಣೆಯಂದು ದಿನಾಂಕ ಘೋಷಿಸಲಾಗುವುದು ಎಂದರು. ಕೇಂದ್ರ ಬಜೆಟ್‌ನಲ್ಲಿ ಕಳೆದ ವರ್ಷದ ಬೇಡಿಕೆಗಳನ್ನೇ ಈಡೇರಿಸುವಂತೆ ಕೇಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಹೆಚ್. ಆಂಜನೇಯ, ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತ ಕುಮಾರ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಂಜಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಇತರರಿದ್ದರು.

## ಹರೀಶ್‌ಗೆ ತಲೆ ಕೆಟ್ಟಿರಬೇಕು : ಸಚಿವ ಎಸ್ಸೆಸ್ಸೆಂ

ಹರೀಶ್ ಅವರಿಗೆ ತಲೆ ಕೆಟ್ಟಿರಬೇಕು, ಎಲುಬಿಲ್ಲದ ನಾಲಿಗೆ ಏನೇನೋ ಮಾತಾಡ್ತಿದೆ ಎಂದು ಸಚಿವ ಎಸ್ಸೆಸ್ಸೆಂ, ಹರಿಹರ ಶಾಸಕ ಬಿ.ಪಿ. ಹರೀಶ್ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಹರೀಶ್ ನನ್ನ ಮನೆಗೆ ಬಂದು ಸಿದ್ದೇಶ್ವರ ವಿರುದ್ಧ ಮಾತನಾಡಿದ್ದರು. ನನ್ನ ಮನೆ ಬಾಗಿಲು ಕಾದದ್ದು ರೇಣುಕಾಚಾರ್ಯ ಅಲ್ಲ, ಬದಲಾಗಿ ಬಿ.ಪಿ. ಹರೀಶ್ ಎಂದರು. ಹರೀಶ್‌ಗೆ ಅವರಪ್ಪನ ಸಮಾಧಿ ಎಲ್ಲಿದೆ ಎಂಬುದೇ ಗೊತ್ತಿರಲಿಲ್ಲ. ಅವರ ಜಮೀನು ಮಾರಾಟ ಮಾಡಿದಾಗ ನಾನೇ ಸಮಾಧಿ ಬಗ್ಗೆ ತಿಳಿಸಿ ಹೇಳಿದ್ದೆ. ಆ ಸ್ಥಳಕ್ಕೆ ಜಾಗ ಬಿಡಿಸುವಂತೆಯೂ ಹೇಳಿದ್ದೆ ಎಂದರು.

**ದಯಾ ಮರಣದ ಕಾರಣ ಪತ್ತೆ ಹಚ್ಚಿ:** ಹರಿಹರದಲ್ಲಿ ಗುತ್ತಿಗೆದಾರನೊಬ್ಬ ದಯಾಮರಣಕ್ಕಾಗಿ ರಾಜ್ಯ ಪಾಲರಿಗೆ ಪತ್ರ ಬರೆದಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪತ್ರ ಬರೆದಿರುವ ಕಾರಣ ಪತ್ತೆ ಹೆಚ್ಚುವಂತೆ ಎಸ್ಪಿ ಅವರಿಗೆ ಸೂಚಿಸಿದರು. ನಮ್ಮದು ಯಾವುದೇ ಪಾಲುದಾರಿಕೆ ಇಲ್ಲ. ಅಲ್ಲಿನ ಶಾಸಕರೇ ಗುತ್ತಿಗೆದಾರನ ಮೇಲೆ ಒತ್ತಡ ಹೇರಿರಬಹುದು ಎಂದರು.

## ವಿಶ್ವ ಕನ್ನಡ ಸಮ್ಮೇಳನ ನಡೆಸಲು ಬದ್ಧ : ಎಸ್ಸೆಸ್ಸೆಂ

(1ನೇ ಪುಟದಿಂದ) ಬದ್ದರಾಗಿದ್ದೇವೆ. ಈ ವಿಚಾರ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಈ ಬಾರಿ ಬಜೆಟ್ ನಲ್ಲಿ ಅನುದಾನ ಮೀಸಲಿಡುವಂತಹ ಪ್ರಯತ್ನ ಮಾಡುತ್ತೇವೆ ಎಂದರು.

## ಸಾಣೇಹಳ್ಳಿಯಿಂದ ಸಂತೇಬೆನ್ನೂರಿನವರೆಗೆ ‘ನಮ್ಮ ನಡೆ ಸರ್ವೋದಯದೆಡೆಗೆ’

ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಸಾನ್ನಿಧ್ಯದಲ್ಲಿ ಇಂದಿನಿಂದ ಇದೇ ದಿನಾಂಕ 30 ರವರೆಗೆ ಸಾಣೇಹಳ್ಳಿಯಿಂದ ಸಂತೇಬೆನ್ನೂರುವರೆಗೆ ‘ನಮ್ಮ ನಡೆ ಸರ್ವೋದಯದೆಡೆಗೆ’ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸರ್ವೋದಯ ರಾಜ್ಯ ಸಂಚಾಲಕ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 8 ಗಂಟೆಗೆ ಸಾಣೇಹಳ್ಳಿಯಿಂದ ಪಾದಯಾತ್ರೆ ಪ್ರಾರಂಭವಾಗಲಿದೆ. ಬೇಗೂರು, ಅಜ್ಜಂಪುರ, ಬುಕ್ಕಾಂಬುದಿ, ತಾವರೆಕೆರೆ, ಪಾಂಡೋಮಟ್ಟಿ, ಚನ್ನಗಿರಿ, ದೇವರಹಳ್ಳಿ ಮೂಲಕ ಸಂತೇಬೆನ್ನೂರಿನಲ್ಲಿ ಮುಕ್ತಾಯವಾಗಲಿದೆ.

## ಮಳಲಕೆರೆ ಪಿಎಸಿಎಸ್‌ಗೆ ಪಟೇಲ್ ರಾಮಚಂದ್ರಪ್ಪ ಅಧ್ಯಕ್ಷ

ದಾವಣಗೆರೆ, ಜ. 26 - ಮಳಲಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪಟೇಲ್ ಜಿ. ಎಸ್. ರಾಮಚಂದ್ರಪ್ಪ ಮತ್ತು ಉಪಾಧ್ಯಕ್ಷರಾಗಿ ಸಿದ್ದಣ್ಣರ ಎಂ. ಶೈಲಮ್ಮ ಇವರು ಆಯ್ಕೆಯಾಗಿದ್ದಾರೆ. ಎಸ್. ಭಾಗ್ಯಶ್ರೀ ಚುನಾವಣಾಧಿಕಾರಿಯಾಗಿದ್ದರು ಎಂದು ಸಂಘದ ಸಿಇಒ ಎಂ.ಕೆ. ಮೋಹನ್‌ಕುಮಾರ್ ತಿಳಿಸಿದ್ದಾರೆ.



## ಆಕರ್ಷಕ ಪಥ ಸಂಚಲನ : ಬಹುಮಾನ

ದಾವಣಗೆರೆ, ಜ.26- ಜಿಲ್ಲಾಡಳಿತದಿಂದ ಭಾನುವಾರ ದಾವಣಗೆರೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥ ಸಂಚಲನದಲ್ಲಿ 29 ತಂಡಗಳು ಪಾಲ್ಗೊಂಡಿದ್ದವು, ಪೊಲೀಸ್ ಅಧಿಕಾರಿ ಹೆಚ್.ಬಿ. ಸೋಮಶೇಖರಪ್ಪ ಪಥಸಂಚಲನದ ನೇತೃತ್ವ ವಹಿಸಿದ್ದರು. ಯುನಿಫಾರಂ ವಿಭಾಗದಲ್ಲಿ ಡಿಎಆರ್ ಪ್ರಥಮ, ಅಗ್ನಿಶಾಮಕ ದಳ ದ್ವಿತೀಯ, ಕಾಲೇಜು ವಿಭಾಗ ಎನ್‌ಸಿಸಿ ಡಿ.ಆರ್. ಎಂ. ವಿಜ್ಞಾನ ಕಾಲೇಜು ಪ್ರಥಮ, ಎ.ಆರ್.ಜಿ ಕಾಲೇಜು ದ್ವಿತೀಯ, ಜಿ.ಎಂ.ಐ.ಟಿ ಕಾಲೇಜು ತೃತೀಯ. ವಿಶೇಷ ವಿಭಾಗ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ತಂಡ ಪ್ರಥಮ, ಸರ್ಟಿಫೈಡ್ ಸ್ಕೂಲ್ ದ್ವಿತೀಯ, ಮೌನೇಶ್ವರಿ ಕಿವುಡ ಮತ್ತು ಮೂಗರ ಶಾಲೆ ತೃತೀಯ, ಪ್ರೌಢಶಾಲಾ ವಿಭಾಗ: ಸೇಂಟ್ ಜಾನ್ಸ್ ಇಂಗ್ಲೀಷ್ ಮೀಡಿಯಂ ಸ್ಕೂಲ್ ಪ್ರಥಮ, ರಾಷ್ಟ್ರೋತ್ಥಾನ ಸ್ಕೂಲ್ ದ್ವಿತೀಯ, ಪಿಎಸ್‌ಎಸ್‌ಇಎಂಆರ್ ಶಾಲೆ ತೃತೀಯ. ಪ್ರಾಥಮಿಕ ವಿಭಾಗ : ಪೊಲೀಸ್ ಪಬ್ಲಿಕ್ ಶಾಲೆ ಪ್ರಥಮ, ಜೈನ್ ಪಬ್ಲಿಕ್ ಶಾಲೆ ದ್ವಿತೀಯ, ಎಸ್‌ಎಸ್‌ಎನ್‌ಪಿಎಸ್ ಶಾಲೆ ತೃತೀಯ ಸ್ಥಾನ ಪಡೆದವು.

## ರಾಷ್ಟ್ರಮಟ್ಟದ ಅಬಾಕಸ್ : ಕಿಡ್ಸ್ ಅಬಾಕಸ್ ಸೆಂಟರ್‌ನ 7 ವಿದ್ಯಾರ್ಥಿಗಳು ಚಾಂಪಿಯನ್



ದಾವಣಗೆರೆ, ಜ. 26 - ಕಲುಬುರ್ಗಿಯಲ್ಲಿ ಕಳೆದ ವಾರ ನಡೆದ 6ನೇ ರಾಷ್ಟ್ರಮಟ್ಟದ ಅಬಾಕಸ್ ಮತ್ತು ಮೆಂಟಲ್ ಅರ್ಥ್‌ಮೆಟಿಕ್ ಸ್ಪರ್ಧೆಯಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸುಮಾರು 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸ್ಪರ್ಧೆಯಲ್ಲಿ ನಗರದ ಕಿಡ್ಸ್ ಅಬಾಕಸ್ ಸೆಂಟರ್‌ನ 7 ವಿದ್ಯಾರ್ಥಿಗಳು ಭಾಗವಹಿಸಿದ್ದು, ಸೂಪರ್ ಚಾಂಪಿಯನ್ ಪ್ರಶಸ್ತಿ ಗಳಿಸಿದ್ದಾರೆ. ಚಂದನ್ ಎಸ್. ಪ್ರಥಮ ರನ್ನರ್ ಅಪ್, ಮೇಘರಾಜ್ ಎಸ್. ಎರಡನೇ ರನ್ನರ್ ಅಪ್ ಮತ್ತು ಜಸ್ರಾಜ್ ಡಿ.ಪಿ. ಲಿಖಿತ್ ಡಿ.ಆರ್., ಹರ್ಷ ಬಣಕಾರ್ ಹಾಗೂ ದೀಕ್ಷಾ ಹೆಚ್.ಎಸ್. ವಿದ್ಯಾರ್ಥಿಗಳು ಮೂರನೇ ರನ್ನರ್ ಅಪ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ನೋಬಲ್ ವರ್ಲ್ಡ್ ರೆಕಾರ್ಡ್ ಪ್ರಮಾಣ ಪತ್ರ ನೀಡಲಾಗಿದೆ.

ವಿದ್ಯಾರ್ಥಿಗಳಗೆ, ಪಾಲಕರಿಗೆ, ಕಿಡ್ಸ್ ಅಬಾಕಸ್ ಸೆಂಟರ್‌ನ ಮುಖ್ಯಸ್ಥರಾದ ಶ್ರೀಮತಿ ಲಕ್ಷ್ಮಿ ಪ್ರಶಾಂತ್, ಆಡಳಿತಾಧಿಕಾರಿ ಪ್ರಶಾಂತ್ ಡಿ.ಆರ್. ಅಭಿನಂದಿಸಿದ್ದಾರೆ.

## ಅಹಲ್ಯಾ ಮಹಿಳಾ ಸಮಾಜದ ಜಿಲ್ಲಾಧ್ಯಕ್ಷರಾಗಿ ಪುಷ್ಪಾ ಆನಂದ್

ದಾವಣಗೆರೆ, ಜ.26- ಜಿಲ್ಲಾ ಅಹಲ್ಯಾ ಮಹಿಳಾ ಸಮಾಜದ ಅಧ್ಯಕ್ಷರಾಗಿ ಪುಷ್ಪಾ ಆನಂದ್, ಗೌರವಾಧ್ಯಕ್ಷರಾಗಿ ನಂಬಕ್ಕ ರೇವಣಸಿದ್ದಪ್ಪ ಆಯ್ಕೆಯಾಗಿದ್ದಾರೆ.

ಜಯಮ್ಮ ಮಾಳಪ್ಪ, ಸುಧಾ ಇಟ್ಟಿಗುಡಿ ಮಂಜನಾಥ್, ಆಶಾ ಉಮೇಶ್, ಪ್ರಮೀಳಾ ರಾಮಚಂದ್ರಪ್ಪ (ಉಪಾಧ್ಯಕ್ಷ), ಡಾ.ಕೆ. ಯೋಗಿತ (ಕಾರ್ಯದರ್ಶಿ), ಡಾ. ಜಯಶೀಲಾ (ಸಹ ಕಾರ್ಯದರ್ಶಿ), ಕವಿತಾ ರಾಘವೇಂದ್ರ, ಡಾ. ಪ್ರೀತಿ (ಖಜಾಂಚಿ), ಲಕ್ಷ್ಮಿ ಬಸವರಾಜು, ರೇಣುಕ ಮಂಜನಾಥ್ (ಸಂಘಟನಾ ಕಾರ್ಯದರ್ಶಿ) ಮತ್ತು ರೇಣುಕ ಬೀರಪ್ಪ, ಭಾಗೀರಥಿ ಪದ್ಮಣ್ಣ ವಧು-ವರರ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ.

ನಾಗರತ್ನ ಓಂ ನಮಃ ಶಿವಾಯ, ಅನುರಾಧ ಗಂಗಾಧರ, ಶಕುಂತಲಾ ಪಾಟೀಲ, ಪುಷ್ಪಾ ಉದಯಶಂಕರ, ಸುಭದ್ರ ರಾಜಪ್ಪ, ಆಶಾ ಶ್ರೀನಿವಾಸ್, ವನಜಾ ಕರಿಯಪ್ಪ, ಸುಚಿತ್ರ, ಪುಷ್ಪ ಹನುಮಂತಪ್ಪ, ಶೀಲಾ ವಿಜಯಕುಮಾರ್, ಡಾ.ರಾಜೇಶ್ವರಿ ಮತ್ತು ಪದ್ಮ ಗಂಗಾಧರ ಅವರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷೆ ಪುಷ್ಪಾ ಆನಂದ್ ತಿಳಿಸಿದ್ದಾರೆ.

# ಮುಂಬರುವ ಪಾಲಿಕೆ ಚುನಾವಣೆಗೆ ಸಿದ್ಧರಾಗಲು ಕರೆ


## ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ

ದಾವಣಗೆರೆ, ಜ. 26 - ಮಹಾನಗರ ಪಾಲಿಕೆಯ ಅವಧಿ ಮುಂದಿನ ತಿಂಗಳು ಅಂತ್ಯಗೊಳ್ಳಲಿದ್ದು, ರಾಜ್ಯ ಸರ್ಕಾರ ಯಾವುದೇ ಸಮಯದಲ್ಲಾದರೂ ಚುನಾವಣೆ ನಡೆಸುವ ಸಾಧ್ಯತೆ ಇರುವುದರಿಂದ ಚುನಾವಣೆ ಎದುರಿಸಲು ಸಿದ್ದರಾಗುವಂತೆ ಕಾರ್ಯಕರ್ತರಿಗೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಕರೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ನಡೆದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯರು, 2018ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ವಾರ್ಡ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರ ನಿರ್ದೇಶನದಂತೆ ನಾವುಗಳು ಮಹಾನಗರ ಪಾಲಿಕೆ ಚುನಾವಣೆ ನಡೆಸಲು ಸಜ್ಜಾಗಿದ್ದು, ಕಾರ್ಯಕರ್ತರು ತಮ್ಮ ತಮ್ಮ ವಾರ್ಡ್‌ಗಳಲ್ಲಿ ಪಕ್ಷದ ಮುಖಂಡರೊಂದಿಗೆ ಸೇರಿ ಪಕ್ಷ ಸಂಘಟನೆ ಮಾಡಬೇಕೆಂದು ಕರೆ ನೀಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಉತ್ತಮ ಸರ್ಕಾರ ಹಾಗೂ ಪಕ್ಷದ



ಸಂಘಟನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವ ಕಾರಣ ಮಹಾನಗರ ಪಾಲಿಕೆಗೆ ಚುನಾವಣೆ ನಡೆದರೆ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ಪಾಲಿಕೆ ಮಹಾಪೌರರಾದ ಕೆ. ಚಮನ್‌ಸಾಬ್ ಮಾತನಾಡಿ, ಕಾಂಗ್ರೆಸ್ ಪಕ್ಷ ಬಡವರ ಪಕ್ಷ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬಡವರ ಅನುಕೂಲಕ್ಕಾಗಿ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಯೋಜನೆಗಳು ಪ್ರತಿ ಕುಟುಂಬಕ್ಕೂ ತಲುಪಿದ್ದು, ಕಾರ್ಯಕರ್ತರು ಮನೆ ಮನೆಗೆ ತೆರಳಿ ಸರ್ಕಾರದ ಸಾಧನೆಗಳನ್ನು ತಿಳಿಸಬೇಕು. ಪ್ರತಿಯೊಬ್ಬ ಕಾರ್ಯಕರ್ತರನ್ನು ಪಕ್ಷ ಗುರುತಿಸಲಿದೆ ಎಂದು ಉದಾಹರಣೆ ಮೂಲಕ ವಿವರಿಸಿದರು.

ಉಪ ಮಹಾಪೌರರಾದ ಸೋಗಿ ಶಾಂತಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶ್ರೀಮತಿ ಅನಿತಾಬಾಯಿ ಮಾಲತೇಶ್, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಸುಭಾನ್ ಸಾಬ್, ಇಂಟಕ್ ವಿಭಾಗದ ಜಿಲ್ಲಾಧ್ಯಕ್ಷ ಮಂಜುನಾಥ್ ಮತ್ತಿತರರು ಮಾತನಾಡಿದರು.

ದಕ್ಷಿಣ ನಗರ ಘಟಕದ ಅಧ್ಯಕ್ಷ ಅಯೂಬ್ ಅಧ್ಯಕ್ಷತೆ ವಹಿಸಿದ್ದರು.

## ವಾಲ್ಮೀಕಿ ಜಾತ್ರೆ ರಾಜನಹಳ್ಳಿಯಲ್ಲಿ ನಾಳೆ ಸಭೆ

ಹರಿಹರ, ಜ.26- ರಾಜನಹಳ್ಳಿಯಲ್ಲಿ ಫೆಬ್ರವರಿ 8 ಮತ್ತು 9 ರಂದು ನಡೆಯುವ 7ನೇ ವರ್ಷದ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 28 ರಂದು ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಆಯೋಜಿಸಲಾಗಿದೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ


**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
**99868 02097**

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
**97421 44715**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
**98442 94446**

**WANTED**
Diploma or Any degree pass or Fail Computer Knowledge is must. Excellent electronics # 2137/1, 4th main, 3rd Cross, MCC `A' Block, Davanagere - 577002. Contact :
**98865 15100**

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ, ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
**91108 98377**

**ಮಳಿಗೆ ಬಾಡಿಗೆಗೆ ಇದೆ**
35.5x13.5 (478 Sqft) ಇರುವ ಮಳಿಗೆ ಹೆಲ್ತ್ ಕ್ಲಿನಿಕ್, ಫೈನಾನ್ಸ್ & ಗಾರ್ಮೆಂಟ್ಸ್‌ಗೆ ಮತ್ತು ಇತರೆಗಳಿಗೆ ಸೂಕ್ತವಾಗಿದೆ. ಎಂಸಿಸಿ ‘ಎ’ ಬ್ಲಾಕ್, 10ನೇ ಮೇನ್, 2ನೇ ಕ್ರಾಸ್.
**94486 30214**

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
**97400 98047**

**ಬಿಲ್ಡಿಂಗ್ ಮಾರಾಟಕ್ಕಿದೆ**
ಚಂದ್ರು ಗಾರ್ಡನ್ ಬಾರ್ & ರೆಸ್ಟೋರೆಂಟ್, ಬಿಲ್ಡಿಂಗ್ ಮಾರಾಟಕ್ಕಿದೆ. ಬೈಪಾಸ್ ರೋಡ್, ದಾವಣಗೆರೆ.
**94483 38709, 94492 02189**

**HOUSE FOR RENT OR COMMERCIAL PURPOSE OR SALE**
40x60, 3 BHK 3101/2 9th main, 2nd cross MCC B Block Davangere
**98443 52144, 94810 32484**

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
**96860 22969**

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
**94485 89727**

**ಬೇಕಾಗಿದ್ದಾರೆ**
ಚಿಕ್ಕಪೇಟೆ ದೊನ್ನೆ ಬಿರಿಯಾನಿ ಹೋಟೆಲ್‌ನಲ್ಲಿ ಕ್ಲೀನರ್ & ಸಪ್ಲೈಯರ್, ಭಟ್ಟರು ಬೇಕಾಗಿದ್ದಾರೆ.
**98448 58461, 7676979162**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
**97398 65711, 94822 44114**

**ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪ್ಲಂಬಿಂಗ್ ಕ್ಷೇತ್ರದಲ್ಲಿ ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್
ಹದಡಿ ರಸ್ತೆ, ದಾವಣಗೆರೆ.
**90080 58121**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**SECURITY GUARD DUTY ಕೆಲಸಕ್ಕೆ ಬೇಕಾಗಿದ್ದಾರೆ**
9000 ವೇತನ ESI PF ಸೌಲಭ್ಯ ಇರುತ್ತದೆ. ಸಂಪರ್ಕಿಸಿ
**70012 87756**

**ಸೈಟು ಮಾರಾಟಕ್ಕಿದೆ**
ಜಿ.ಎಂ.ಐ.ಟಿ. ಕಾಲೇಜು ಹಿಂಭಾಗ 30x40 ಅಳತೆಯ ಸೈಟು ಮಾರಾಟಕ್ಕಿದೆ.
**ಮೊ: 98443 95959**

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
**91106 21233**

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
**94489 24273**

**ಮನೆ ಮಾರಾಟಕ್ಕಿದೆ**
30x30 ಅಳತೆಯ ಪಶ್ಚಿಮ ದಿಕ್ಕಿನ 3 BHK ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ. ನಿಜಲಿಂಗಪ್ಪ ಬಡಾವಣೆ. ಸಂಪರ್ಕಿಸಿ :
**96068 50128**
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ )

**ಹೋಲ್ ಸೇಲ್ ದರದಲ್ಲಿ ರೊಟ್ಟಿ ಸಿಗುತ್ತದೆ.**
ಟೇಬಲ್ ರಾಕ್ಸ್ ಮಾರಾಟಕ್ಕಿದೆ ಮತ್ತು Part jobs ಗಳು ಇರುತ್ತವೆ. ಸಂಪರ್ಕಿಸಿ :
**72592 22590, 89712 81856**

**ಬೇಕಾಗಿದ್ದಾರೆ**
ಊಟದ ಹೋಟೆಲ್‌ಗೆ ಕ್ಲೀನರ್ ಮತ್ತು ಸಪ್ಲೈಯರ್‌ಗಳು ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇದೆ.
**99861 17995**
**73538 89971**

**WANTED**
Male candidates any degree with computer knowledge is must. Accomondation & food will be provided
**Monthly Salary : 8000/-**
Whats app : 99887 72291
P.B. Road, Davanagere

**ಮನೆ ಬಾಡಿಗೆಗೆ ಇದೆ**
2BHK ತರಳಬಾಳು ನಗರ ರಂಗನಾಥ ಬಡಾವಣೆ, 7ನೇ ಕ್ರಾಸ್, ದಾವಣಗೆರೆ.
**78998 88993**


**4ನೇ ವರ್ಷದ ಪುಣ್ಯಸ್ಮರಣೆ**



ಜನನ : 1963 ನಿಧನ : 26.01.2021

**ದಿ|| ಶ್ರೀಮತಿ ಸುನೀತಾ**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಪತಿ : ಶ್ರೀ ಲಕ್ಷ್ಮಣರಾವ್ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ-ಬಂಧುಗಳು**

॥ ಶ್ರೀ ಬನಶಂಕರಿ ದೇವಿ ಪ್ರಸನ್ನ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಎಂ.ಸಿ.ಸಿ. ‘ಬಿ’ ಬ್ಲಾಕ್ ವಾಸಿ **ಶ್ರೀಮತಿ ಜಯಶ್ರೀ ರವಿಶಂಕರ್ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 19.01.2025ನೇ ಭಾನುವಾರ ರಾತ್ರಿ 11.45ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀ ರವಿಶಂಕರ್ ಕೆ.ಎಂ.** ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 27.01.2025ನೇ ಸೋಮವಾರ ಮಧ್ಯಾಹ್ನ 12.30ಕ್ಕೆ ದೊಡ್ಡಪೇಟೆಯಲ್ಲಿರುವ ಬಸವ ಮಂಟಪ - ಶ್ರೀ ದಾನೇಶ್ವರಿ ಆವರಣ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಜಯಶ್ರೀ ರವಿಶಂಕರ್ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು**

ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ತಿಳಿದು ಆಗಮಿಸಲು ವಿನಂತಿ.

**ನಾಗರಾಜ್ ಜಿ. ನಿಧನ**



ದಾವಣಗೆರೆ ಸಿಟಿ ವಿಜಯನಗರ ಬಡಾವಣೆ, ಆರ್‌ಟಿಓ ಆಫೀಸ್ ಹತ್ತಿರದ ಕೊಂಡಜ್ಜಿ ರಸ್ತೆ ವಾಸಿ ನಾಗರಾಜ್ ಜಿ. (67) ಇವರು ದಿನಾಂಕ : 26.01.2025ರ ಭಾನುವಾರ ರಾತ್ರಿ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 27.01.2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಕೊಂಡಜ್ಜಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

# ಉತ್ತರಾಖಂಡದಲ್ಲಿ ಇಂದಿನಿಂದ ಏಕರೂಪ ನಾಗರಿಕ ಸಂಹಿತೆ ಜಾರಿ




ಡೆಹರಾಡೂನ್,ಜ. 26- ಸೋಮವಾರದಿಂದ ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂದು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುತ್ತಿರುವ ಮೊದಲ ರಾಜ್ಯ ಉತ್ತರಾಖಂಡ ಆಗಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಿದ್ಧತೆಗಳು ಪೂರ್ಣಗೊಂಡಿವೆ. ಇದಕ್ಕಾಗಿ ಅಗತ್ಯ ನಿಯಮಗಳ ಜಾರಿಗೆ ಒಪ್ಪಿಗೆ ನೀಡಲಾಗಿದೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ ಎಂದು ಧಾಮಿ ತಿಳಿಸಿದ್ದಾರೆ.

ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳು ಹಾಗೂ ಹೊಣೆಗಾರಿಕೆ ದೊರೆಯಬೇಕು ಎಂಬ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

2022 ರಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆದ ಸಂದರ್ಭದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವುದನ್ನು ಬಿಜೆಪಿ ಪ್ರಮುಖವಾಗಿ ಪ್ರಸ್ತಾಪಿಸಿತ್ತು. ನಂತರ ಸತತ ಎರಡನೇ ಅವಧಿಗೆ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. 2000 ದಲ್ಲಿ ಪ್ರತ್ಯೇಕ ರಾಜ್ಯ ರೂಪುಗೊಂಡ ನಂತರ ಸತತ ಎರಡನೇ ಬಾರಿಗೆ ಪಕ್ಷವೊಂದು ಅಧಿಕಾರಕ್ಕೆ ಬಂದಿರುವುದು ಇದೇ ಮೊದಲು.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಬದ್ಧತೆಯ ಕಾರಣದಿಂದಾಗಿಯೇ ಈ ಐತಿಹಾಸಿಕ ಜನಾದೇಶ ದೊರೆತಿದೆ ಎಂದು ಧಾಮಿ ಹೇಳಿದ್ದರು ಧಾಮಿ ಸರ್ಕಾರ ಮಾರ್ಚ್ 2022 ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣವೇ ಏಕರೂಪ ನಾಗರಿಕ ಸಮಿತಿ ಜಾರಿಗಾಗಿ ಕ್ರಮಗಳನ್ನು ತೆಗೆದುಕೊಳ್ಳಾಗಿತ್ತು.

ಸೋಮವಾರದಿಂದ ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬರಲಿರುವುದು ಬಿಜೆಪಿ ಆಡಳಿತದ ಇತರೆ ರಾಜ್ಯಗಳಿಗೂ ಪ್ರಾಮುಖ್ಯತೆ ಪಡೆದುಕೊಂಡಿದೆ.

ಏಕರೂಪ ನಾಗರಿಕ ಸಂಹಿತೆ ಅಳವಡಿಸಿಕೊಳ್ಳಲು ಅಸ್ಸಾಂ ಈಗಾಗಲೇ ಒಲವು ವ್ಯಕ್ತಪಡಿಸಿದೆ. ಬಿಜೆಪಿ ಆಡಳಿತದ ಎಲ್ಲಾ ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ರಾಜ್ಯಸಭೆಯಲ್ಲಿ ತಿಳಿಸಿದ್ದರು.

## ಗ್ರಾಹಕರಿಗೆ ನೇರ ಕೃಷಿ ಉತ್ಪನ್ನ ಮಾರಾಟಕ್ಕೆ ಕೇಂದ್ರದ ಯೋಜನೆ

ನವದೆಹಲಿ, ಜ. 26- ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಲು ಸಾಧ್ಯವಾಗುವ ವ್ಯವಸ್ಥೆ ರೂಪಿಸಲು ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಗಣರಾಜ್ಯೋತ್ಸವ ಸಂದರ್ಭದಲ್ಲಿ ಕೃಷಿಕರ ಜೊತೆ ಸಂವಾದ ನಡೆಸಿದ ಅವರು, ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಮಾರುವುದರಿಂದ ರೈತರಿಗೆ ಗರಿಷ್ಠ ಲಾಭ ಸಿಗುತ್ತದೆ ಎಂದು ತಿಳಿಸಿದರು.

# ಗ್ಯಾರಂಟಿಯಿಂದ ಆರ್ಥಿಕ ಸಬಲತೆ: ಎಸ್ಸೆಸ್ಸೆಂ

## 76ನೇ ಗಣರಾಜ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದ ಸಚಿವರು



ದಾವಣಗೆರೆ, ಜ. 26- ಜನಸಾಮಾನ್ಯರ ಬದುಕಿಗೆ ಆರ್ಥಿಕ ಸಬಲತೆಯೊಂದಿಗೆ, ಸಾಮಾ ಜಿಕ ಗೌರವ ತಂದುಕೊಡುವ ದೃಷ್ಟಿಯಿಂದ ಸರ್ಕಾರ 5 ಗ್ಯಾರಂಟಿ ಯೋಜನೆಗಳ ಜೊತೆಗೆ ಹಲವಾರು ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್ ಮಲ್ಲಿಕಾರ್ಜುನ್ ಹೇಳಿದರು.

ಭಾನುವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸ ಲಾಗಿದ್ದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾ ರೋಹಣ ನೆರವೇರಿಸಿ, ಪಥ ಸಂಚಲನದಲ್ಲಿ ವಿವಿಧ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿ ತಮ್ಮ ಸಂದೇಶದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಈವರೆಗೂ 5 ಗ್ಯಾರಂಟಿ ಯೋಜನೆ ಗಳಿಂದ ಒಟ್ಟು ರೂ. 1966 ಕೋಟಿ ಮೊತ್ತವನ್ನು ನೇರವಾಗಿ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಅವರ ಖಾತೆಗೆ ವರ್ಗಾಯಿಸಲಾಗಿದೆ ಎಂದರು.

ರೈತರ ಬದುಕನ್ನು ಇನ್ನಷ್ಟು ಹಸನಗೊಳಿ ಸಲು ಸರ್ಕಾರ ಬದ್ಧವಾಗಿದೆ. ಕೆರೆ ತುಂಬಿಸುವ ಯೋಜನೆ, ನಾಲೆಗಳ ದುರಸ್ತಿ ಕೈಗೊಳ್ಳುವ ಮೂಲಕ ಕೊನೆ ಭಾಗಕ್ಕೂ ನೀರು ಸಿಗುವಂತೆ ಮಾಡುವುದು ನಮ್ಮ ಉದ್ದೇಶವಾಗಿದೆ ಎಂದರು.



ಪಥ ಸಂಚಲನದಲ್ಲಿ ವಿವಿಧ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್

ಜನರ ಆರೋಗ್ಯ ರಕ್ಷಣೆಯೂ ಸರ್ಕಾರದ ಜವಾಬ್ದಾರಿಯಾಗಿದೆ. ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ರೂ. 35 ಕೋಟಿ ವೆಚ್ಚದಲ್ಲಿ ಮಹಿಳಾ ಮತ್ತು ಮಕ್ಕಳ ಚಿಕಿತ್ಸಾ ಘಟಕವನ್ನು ಹಾಗೂ ರೂ. 13 ಕೋಟಿ ವೆಚ್ಚದಲ್ಲಿ ಅಪಘಾತ ಮತ್ತು ಟ್ರಾಮಾ ಕೇರ್‌ಸೆಂಟರ್ ಕಾರ್ಯಾರಂಭ ಮಾಡಲಾಗಿದೆ. ಅತ್ಯವಶ್ಯಕವಾಗಿದ್ದ ತೀವ್ರ ನಿಗಾ ಘಟಕ ನಿರ್ಮಾಣಕ್ಕೆ ರೂ. 17 ಕೋಟಿ ಅನುದಾನ ನೀಡಲಾಗಿದೆ. ಇದಲ್ಲದೇ ಹೊನ್ನಾಳಿ ಕತ್ತಿಗೆ ಮತ್ತು ಕೂಲಂಬಿಯಲ್ಲಿ ರೂ. 6 ಕೋಟಿ ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹೊಸ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದರು.

ಜಿಲ್ಲೆಗೆ ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ 8,510 ಮನೆಗಳನ್ನು ಮಂಜೂರು ಮಾಡಲಾಗಿದೆ. ಎನ್.ಆರ್. ಎಲ್.ಎಂ. ಸಂಜೀವಿನಿ ಯೋಜನೆಯಡಿ 2 ಅಕ್ಕ ಕೆಫೆ ಮಂಜೂರಾಗಿದ್ದು ಈಗಾಗಲೇ ದಾವಣಗೆರೆ ನಗರದಲ್ಲಿ ಆರಂಭಿಸ ಲಾಗಿದೆ. ಮಹಿಳಾ ಸ್ವ ಸಹಾಯ ಸಂಘದವರೇ ಇದರ ನಿರ್ವಹಣೆ ಮಾಡುವರು ಎಂದು ಹೇಳಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಿ.ಆರ್.ಆರ್ ಶಾಲೆಗಳ ತಂಡ ಪ್ರಥಮ ಸ್ಥಾನ, ಅಲ್ ಇಕ್ರಾ ಶಾಲೆ ದ್ವಿತೀಯ ಸ್ಥಾನ, ಸೆಂಟ್ ಜಾನ್ಸ್ ಪ್ರೌಢಶಾಲೆ ತೃತೀಯ ಸ್ಥಾನ ಪಡೆದವು. ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಸದೆ ಡಾ.ಪ್ರಭಾ (5ನೇ ಪುಟಕ್ಕೆ)

# ಮೇಕಾ ಸೂರ್ಯನಾರಾಯಣರ ಪ್ರತಿಮೆ ಅನಾವರಣ, ನಾಲ್ಕು ವೃತ್ತಗಳಿಗೆ ನಾಮಕರಣ

ದಾವಣಗೆರೆ, ಜ.26- ಕಾಂಗ್ರೆಸ್ ಪಕ್ಷಕ್ಕೆ ಮೇಕಾ ಸೂರ್ಯನಾರಾಯಣರು ಶಕ್ತಿಯಾಗಿದ್ದರು. ಇಂತಹ ಶಕ್ತಿಯನ್ನು ಜಿಲ್ಲಾ ಕಾಂಗ್ರೆಸ್ ಕಳೆದುಕೊಂಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮೇಕಾ ಅವರನ್ನು ನೆನಪಿಸಿಕೊಂಡರು.

ಇಲ್ಲಿಗೆ ಸಮೀಪದ ಕಡ್ಲೇಬಾಳು ಗ್ರಾಮದ ಶ್ರೀ ಮಧ್ವಾಂಜನೇಯ ಸ್ವಾಮಿ ದೇವಸ್ಥಾನದ ಆವರಣ ದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಿ. ಮೇಕಾ ಸೂರ್ಯನಾರಾಯಣರವರ 25ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಪ್ರತಿಮೆ ಅನಾವರಣಗೊಳಿಸಿ ಅವರು ಮಾತನಾಡಿದರು.

ಮೇಕಾರವರು ಉತ್ತಮ ಅನುಭವಿ ರಾಜಕಾರಣಿಯಾಗಿದ್ದರು. ಜನರಿಗೆ ಹತ್ತಿರವಾಗಿ ಬದುಕು ನಡೆಸಿದ ಅವರು, ಬಡವರು ಹಾಗೂ ಸಮಾಜದಲ್ಲಿನ ಎಲ್ಲರ ಸಮಸ್ಯೆಗಳಿಗೆ ಕಿವಿಯಾಗಿ ಸ್ಪಂದಿಸುತ್ತಿದ್ದರು ಮತ್ತು ಪಕ್ಷದಲ್ಲಿ ಸ್ನೇಹ ಜೀವಿಯಾಗಿ ಬೆರೆಯುತ್ತಿದ್ದರು ಎಂದು ಅವರನ್ನು ಸ್ಮರಿಸಿದರು.



ಈ ಭಾಗದ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಇವರು ಸಾಕ್ಷಿಯಾಗಿದ್ದಾರೆ. ಬಡವರು ಹಾಗೂ ನಿರಾಶ್ರಿತರಿಗೆ ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಇವರ ತಂಡ ನಾಗಮ್ಮ ಕೇಶವಮೂರ್ತಿ ಅವರೊಂದಿಗೆ ಇದ್ದು, ಪ್ರತಿ ಚುನಾವಣೆಯನ್ನೂ ಅಚ್ಚುಕಟ್ಟಾಗಿ ಎದುರಿಸಿ, ಗೆಲುವಿಗಾಗಿ ಶ್ರಮಿಸುತ್ತಿತ್ತು ಎಂದು ತಿಳಿಸಿದರು.

ಮೇಕಾ ಸೂರ್ಯನಾರಾಯಣ ಅವರ ಪಕ್ಷ ಸಂಘಟನೆಯ ದಾರಿ ಮತ್ತು ಅವರ ಮಾರ್ಗದರ್ಶನ ದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ನಡೆದು, ಇನ್ನು ಹೆಚ್ಚಿನ

### ಕಾಂಗ್ರೆಸ್ ಪಕ್ಷಕ್ಕೆ 'ಮೇಕಾ' ಶಕ್ತಿಯಂತೆ ಇದ್ದರು : ಎಸ್ಸೆಸ್ಸೆಂ

ಅಭಿವೃದ್ಧಿ ಕಾರ್ಯ ಮಾಡಲು ಮುಂದಾಗೋಣ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಶ್ರೀ ಡಾ. ಕರಿ ವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಮೇಕಾ ಸೂರ್ಯನಾರಾಯಣರು ಕಲಿಯುಗದ ಬಸವಣ್ಣನಂತಿದ್ದರು ಎಂದು ಅವರ ಸಾಮಾಜಿಕ ಸೇವೆಯನ್ನು ಪ್ರಶಂಸಿಸಿದರು.

ಮಾತೃಹೃದಯವಂತಿಕೆಯಿಂದ ಜನಸೇವೆಯಲ್ಲಿ ಮುಳುಗಿದ ಇವರು ರಸ್ತೆ, ಶಾಲೆ, ಕುಡಿಯುವ ನೀರು ಹಾಗೂ ವಸತಿ ವ್ಯವಸ್ಥೆಯನ್ನು ಜನರಿಗೆ ನೀಡುವ ಮುಖೇನ ಬಸವಣ್ಣನವರ ಆಶಯದಲ್ಲಿ ಬದುಕಿದ್ದರು. ಇವರಿಗೆ ಮುಕ್ತಿ ದೊರೆಯಲಿ ಎಂದು ಹಾರೈಸಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಅಂದಿನ ರಾಜಕೀಯಕ್ಕೂ ಇಂದಿನ ರಾಜಕೀಯಕ್ಕೂ ಬಹಳ ವ್ಯತ್ಯಾಸ ಇದೆ. ಅಂದಿನ ರಾಜಕೀಯ ನಾಯಕರಲ್ಲಿ ಸೇವಾ ಮನೋಭಾವವಿತ್ತು. ಆದರೆ ಇಂದಿನ ನಾಯಕರು ಕಮರ್ಷಿಯಲ್ ಆಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಮೇಕಾ ಸೂರ್ಯನಾರಾಯಣ ಅವರು ಸೇವಾ ಮನೋಭಾವ ಹೊಂದಿದ ನಾಯಕರಾಗಿದ್ದರು. ಇಂತಹ ಸೇವಾ ಮನೋಭಾವ ಗುಣ ಹಾಗೂ ಅವರ ಮಾರ್ಗದರ್ಶನದಲ್ಲಿ ನಾವು ನಡೆಯಬೇಕು ಎಂದು ಹೇಳಿದರು.

ಶೋಷಿತರು, ಬಡವರು ಹಾಗೂ ತಳ ಸಮುದಾಯದ ಅಭಿವೃದ್ಧಿಗಾಗಿ ಮೇಕಾ ಸೂರ್ಯನಾರಾಯಣರು ಶ್ರಮಿಸಿದ್ದರು. ಬಡವರಿಗೆ ಒಳಿತು ಮಾಡುವ ಗುಣ ಅವರಲ್ಲಿತ್ತು ಎಂದು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ್ ಶ್ಲಾಘಿಸಿದರು.

ಕಾರ್ಯಕ್ರಮದ ಪ್ರಾರಂಭಕ್ಕೂ ಮುನ್ನ ಅರಸಾಪುರ, ದೊಡ್ಡ ಓಬಜ್ಜಿಹಳ್ಳಿ, ಬದಿಯನಾಯಕನ ಹಟ್ಟಿ ಹಾಗೂ ಚಿಕ್ಕ ಓಬಜ್ಜಿಹಳ್ಳಿ ಗ್ರಾಮಗಳಲ್ಲಿನ ವೃತ್ತಗಳಿಗೆ ಮೇಕಾ ಸೂರ್ಯನಾರಾಯಣ ಹೆಸರನ್ನು ನಾಮಕರಣ ಮಾಡಲಾಯಿತು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಮಾಜಿ ಸಚಿವ ಹೆಚ್. ಆಂಜನೇಯ, ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಪಂಚಮಸಾಲಿ ಸಮಾಜದ ಬಿ.ಸಿ. ಉಮಾಪತಿ, ಮಾಜಿ ಶಾಸಕ ಬಿ.ಹೆಚ್. ತಿಪ್ಪಾರೆಡ್ಡಿ, ಎಪಿಎಂಸಿ ಮಾಜಿ ಅಧ್ಯಕ್ಷ ರಾಘವೇಂದ್ರ ನಾಯಕ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ವೇಣುಗೋಪಾಲ್ ರೆಡ್ಡಿ, ಕೆಪಿಸಿಸಿ ಸದಸ್ಯ ಆರ್.ಎಸ್. ಶೇಖರಪ್ಪ, ನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಡಿ.ಬಸವರಾಜ್, ಉದಯಶಂಕರ್ ಒಡೆಯರ್, ನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್. ಎಂ. ರುದ್ರಮುನಿಸ್ವಾಮಿ, ಹಿರಿಯ ಪತ್ರಕರ್ತ ಬಿ. ಎನ್. ಮಲ್ಲೇಶ್ ಇತರರು ಉಪಸ್ಥಿತರಿದ್ದರು.

ಮೇಕಾ ಸೂರ್ಯನಾರಾಯಣ ಅವರ ಪುತ್ರರೂ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷರೂ, ಕಮ್ಮ ಸಮಾಜ ಮತ್ತು ರೆಡ್ಡಿ ಜನ ಸಂಘದ ಅಧ್ಯಕ್ಷರೂ ಆದ ಮೇಕಾ ಮುರುಳೀಕೃಷ್ಣ, ರಿಯಲ್ ಎಸ್ಟೇಟ್ ಉದ್ಯಮಿ ಮೇಕಾ ಸತ್ಯನಾರಾಯಣ ಸಹೋದರರು ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಸ್ವಾಗತಿಸಿದರು.




ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧೀಜಿ ಕನಸು
ಕರ್ನಾಟಕದಲ್ಲಿ ನನಸು
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಮಹಿಳೆಯರ ಸಬಲೀಕರಣಕ್ಕೆ ಮಾದರಿ ಯೋಜನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಫಲಾನುಭವಿಗಳ ಸಂಖ್ಯೆ: 359 ಕೋಟಿ
ಒಟ್ಟು ವೆಚ್ಚ: ರೂ.8,688 ಕೋಟಿ
*22ನೇ ಡಿಸೆಂಬರ್ 2024ಕ್ಕೆ
ನುಡಿದಂತೆ ನಡೆದಿದ್ದೇವೆ...
ಗೃಹಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10kg
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ₹1500
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ




**ದಿನಾಂಕ : 26.01.2025 ರಿಂದ 01.02.2025ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬದುಕಿನಲ್ಲಿ ಎಷ್ಟೇ ಸುಖ, ಸಂತೋಷವಿದೆಯೆಂದರೂ ಕೆಲವು ಕಹಿಘಟನೆಗಳು ನಿಮ್ಮನ್ನು ಹೈರಾಣಾಗಿಸಲಿವೆ. ಆದಾಯದ ಏರಿಕೆ ಉತ್ತಮವಾಗಿಯೇ ಇರುವುದರಿಂದ ಅದರ ಚಿಂತೆಬೇಡ. ಅಧ್ಯಾಪಕ ವೃಂದದವರಿಗೆ ತುಸು ಆತಂಕದ ದಿನಗಳು ಎದುರಾಗಲಿವೆ. ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ವೈಯುಕ್ತಿಕ ಕೆಲಸ, ಕಾರ್ಯಗಳಿಗೆ ಬಂಧು-ಬಳಗವನ್ನು ನಂಬಲು ಹೋಗಬೇಡಿ. ಏಕೆಂದರೆ ಅವರಿಂದಲೇ ಕೆಲವೊಮ್ಮೆ ಮೋಸಹೋಗಬಹುದು. ಸಂಗಾತಿಯನ್ನು ಪಾಲುದಾರಳನ್ನಾಗಿ ಮಾಡಿಕೊಳ್ಳುವುದರಿಂದ ನಿಮಗೆ ಹೆಚ್ಚಿನ ಲಾಭವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಮಂಗಳ-ಬುಧ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸಂಸಾರದಲ್ಲಿ ಎಷ್ಟೇ ಸಂಕಷ್ಟಗಳು ಎದುರಾದರೂ ಅದನ್ನು ಎದುರಿಸುವ ಜಾಣ್ಮೆ ತಾಳ್ಮೆ ನಿಮ್ಮಲ್ಲಿದೆ ಮತ್ತು ಇದು ಎಲ್ಲರಿಗೂ ಅಚ್ಚರಿಯನ್ನುಂಟು ಮಾಡಲಿದೆ. ಆದಾಯವು ಹೆಚ್ಚಿಲ್ಲದಿದ್ದರೂ ನಿರೀಕ್ಷೆ ಸಮೀಪಕ್ಕೆ ಬರಲಿದೆ. ಹಿರಿಯರ ಆಸ್ತಿಯಲ್ಲಿ ನಿಮಗೆ ಬರಬೇಕಾಗಿರುವ ಪಾಲು ತುಸು ಹೆಚ್ಚೇ ಬರಲಿದೆ. ರೈತಾಪಿ ಜನರಿಗೆ ಕೃಷಿಯಿಂದ ಲಾಭವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬರಲಿದೆ. ಉನ್ನತಾಧ್ಯಯನಕ್ಕೆ ಸಾಮಾಜಿಕ ಬೆಂಬಲಸಿ ಗಲಿದೆ. ನಿಮ್ಮದೇ ಸರಿಯೆಂಬ ಕೆಲವು ನಿರ್ಧಾರಗಳು ಲೆಕ್ಕಾಚಾರವನ್ನು ಉಲ್ಟಾ ಮಾಡಬಹುದು. ಗುರುಗಳ ಸೇವೆ ಮಾಡಿ. ಭಾನು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ದುಡಿದು ದಣಿದ ದೇಹಕ್ಕೆ ಹೆಚ್ಚಿನ ಆಲಸ್ಯ ಕಂಡುಬರಲಿದೆ. ತುಸು ವಿಶ್ರಾಂತಿ ಪಡೆಯುವುದು ಮೇಲು, ಮಗನ ಆದಾಯದಲ್ಲಿ ತುಸು ಕುಸಿತ ಕಂಡುಬರಲಿದೆ. ಹೊಸ ಯೋಜನೆಗಳನ್ನಾಗಲೀ ಅಥವಾ ಹೊಸ ಮನೆಕಟ್ಟುವ ವಿಚಾರವನ್ನು ಮುಂದೂಡುವುದು ಉತ್ತಮ. ವ್ಯವಹಾರದಲ್ಲಿ ತೊಡಗಿಕೊಳ್ಳುವ ಮೊದಲು ಅದರ ಸ್ವರೂಪದ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವುದು ಮೇಲು. ಊಟೋಪಚಾರ ವಿಚಾರದಲ್ಲಿ ಇತಿ-ಮಿತಿಯಿಡದೇ ಹೋದಲ್ಲಿ ಹಲ್ಲು ನೋವು ಮೊದಲಾದ ಮುಖ ಸಂಬಂಧಿ ಆರೋಗ್ಯ ಸಮಸ್ಯೆ ಕಾಡಬಹುದು. ವಿದೇಶ ಪ್ರಯಾಣವನ್ನು ಸದ್ಯಕ್ಕೆ ಮುಂದೂಡುವುದು ಮೇಲು ಗೋಗ್ರಾಸ ನೀಡಿ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಸರಿಯಾದ ಊಟೋಪಚಾರವಿಲ್ಲದೇ ಇರುವುದರಿಂದ ದೇಹದಲ್ಲಿ ನಿಶ್ಯಕ್ತಿ ಕಾಣಿಸಿಕೊಳ್ಳಲಿದೆ. ಮಗನ ಉದ್ಯೋಗದಲ್ಲಿ ಪದೋನ್ನತಿಯಾಗಲಿದ್ದು, ವೇತನದಲ್ಲೂ ಹೆಚ್ಚಳವಾಗಲಿದೆ. ಪ್ರವಚನಕಾರರಿಗೆ ಉತ್ತಮ ವೇದಿಕೆ ದೊರೆಯಲಿದ್ದು, ಹೆಚ್ಚಿನ ಸಂಪಾದನೆಯಾಗಲಿದೆ, ನಿಮ್ಮಲ್ಲಿ ದುರಭ್ಯಾಸಗಳಿದ್ದಲ್ಲಿ ಅದು ನಿಮ್ಮ ನರಗಳ ದೌರ್ಬಲ್ಯಕ್ಕೆ ಕಾರಣವಾಗಬಹುದು.ಇದು ಅಲಕ್ಷಿಸುವ ವಿಷಯವಲ್ಲ ಎಂಬುದು ನೆನಪಿರಲಿ, ರಿಯಲ್ ಎಸ್ಟೇಟ್ ವ್ಯವಹಾರದವರಿಗೆ ಹಲವು ತಾಂತ್ರಿಕ ತೊಂದರೆಗಳು ಎದುರಾಗಬಹುದು, ಕುಲದೇವತಾರಾಧನೆ ಮಾಡಿ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕೆಲವೊಮ್ಮೆ ನಿಮ್ಮ ನಿರ್ಧಾರಗಳು ಸರಿಯಿಲ್ಲದೇ ಇರಬಹುದು. ಆದ್ದರಿಂದ ಈ ವಿಷಯದಲ್ಲಿ ಅನುಭವಿಗಳಾದ ಹಿರಿಯರ ಸಲಹೆ, ಸೂಚನೆ ಪಡೆಯುವುದು ಮೇಲು, ಆದಾಯದಲ್ಲಿ ಸಾಧಾರಣ ಏರಿಕೆಯಾಗಲಿದೆ. ಅರಿತೋ, ಮರೆತೋ ತೆಗೆದುಕೊಂಡ ಆಸ್ತಿಯೊಂದು ತಲೆನೋವಾಗಿ ಸಂಭವಿಸಲಿದೆ. ಕೂಡಲೇ ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಮೇಲು. ಹೊಸ ವ್ಯವಹಾರದಲ್ಲಿ ಪ್ರಗತಿ ಕಾಣಲಿದೆ.ಮಡದಿಯ ಮನಸ್ಸಿನಲ್ಲಿ ಇಲ್ಲ-ಸಲ್ಲದ ವಿಚಾರಗಳಿದ್ದು, ಇದರಿಂದ ನಿಮಗೆ ಸಮಸ್ಯೆಯಾಗಲಿದೆ. ಮಗನಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ಗಣೇಶನನ್ನು ಆರಾಧಿಸಿ. ಭಾನು-ಸೋಮ-ಗುರು-ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮನಸ್ಸಿನಲ್ಲಿ ಹೊಸ ಹೊಸ ಆಲೋಚನೆಗಳು ಮನೆಯ ಸದಸ್ಯರೆಲ್ಲರಿಗೂ ಒಂದು ರೀತಿಯಲ್ಲಿ ಸಮಸ್ಯೆಗಳಾಗಿ ಕಾಡಲಿದೆ. ಇದರಿಂದ ಹೊರಬರಲು ಪ್ರಯತ್ನಿಸಿ. ಕುಸಿದ ಆದಾಯ ಎಲ್ಲಾ ಆರ್ಥಿಕ ಸಮಸ್ಯೆಗಳನ್ನು ಪೂರೈಸಲು ಸಾಕಾಗದೇ ಹೋಗಬಹುದು. ನಿಧಾನವೇ ಪ್ರಧಾನ ಎಂಬ ನೀತಿ ಈ ವಾರದ ಮಟ್ಟಿಗೆ ಸರಿಹೋಗಲಿದೆ. ಮಹಿಳೆಯರೊಂದಿಗೆ ಮಾಡುವ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾಗುವುದಲ್ಲದೇ, ಮಾನ ನಷ್ಟವಾಗಲಿದೆ. ಉನ್ನತ ವಿದ್ಯಾಭ್ಯಾಸದ ವಿಚಾರದಲ್ಲಿ ವಿದ್ಯಾರ್ಥಿಗಳು ಕೂಡಲೇ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮೇಲು ಗುರು ಚರಿತ್ರೆ ಪಾರಾಯಣ ಮಾಡಿ. ಮಂಗಳ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನೀವು ಪಡಲಿರುವ ಎಲ್ಲಾ ಶ್ರಮಗಳಿಗೆ ಸೂಕ್ತ ಫಲ ಸಂದಾಯವಾಗಲಿದೆ 'ಕ್ಲೇಶಃಫಲೇನ ಹಿ ಪುನರ್ನವತಾಂ ವಿಧತ್ತೇ' ಎಂಬ ಮಾತು ನಿಮಗೆ ಸರಿಯಾಗಲಿದೆ, ಇದರಿಂದ ಇನ್ನೂ ಶ್ರಮಪಡಲು ಉತ್ಸಾಹ ಹೆಚ್ಚಲಿದೆ. ಸೋದರನ ಆದಾಯದಲ್ಲಿ ತುಸು ಕಡಿತ ಕಂಡುಬರಲಿದೆ. ಹೊಸ ಪಾಲುದಾರನ ಪೂರ್ವಾಪರ ತಿಳಿಯದೆ, ಪಾಲುದಾರಿಕೆಯಲ್ಲಿ ತೊಡಗಿಸಿದ್ದಕ್ಕೆ ಈಗ ಪಶ್ಚಾತ್ತಾಪ ಪಡುವಿರಿ. ಮಹಿಳಾ ನೌಕರರಿಗೆ ಉದ್ಯೋಗದಲ್ಲಿ ಮೇಲಾಧಿಕಾರಿಗಳಿಂದ ಕಿರುಕುಳ, ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿದೆ. ಅನ್ನದಾನ ಮಾಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಗೊಂದಲದ ಗೂಡಾಗಿದ್ದ ಆಸ್ತಿ ಹಂಚಿಕೆ ವಿಷಯ ಹಿರಿಯರ ಮಧ್ಯಸ್ಥಿಕೆಯಿಂದಾಗಿ ಸುಖಾಂತ್ಯವಾಗಲಿದೆ. ರಾಜಕೀಯ ರಂಗದಲ್ಲಿ ಪರಸ್ಪರ ಮೇಲಾಟಗಳೇ ಹೆಚ್ಚಾಗಲಿವೆ. ವಿದೇಶದಲ್ಲಿ ಕಲಿಯಬೇಕೆನ್ನುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ. ಆದಾಯದ ಮೂಲದಲ್ಲಿ ಹೆಚ್ಚಿನ ನಿರೀಕ್ಷೆಬೇಡ. ಅವಿವಾಹಿತರಿಗೆ ನಿಶ್ಚಯವಾಗಿದ್ದ ಸಂಬಂಧಗಳು ಮುರಿದು ಹೋಗುವ ಸಂಭವವಿದೆ. ಹೈನುಗಾರಿಕೆ ರೈತಾಪಿ ಜನರಿಗೆ ಲಾಭದಾಯಕವಾಗಲಿದೆ. ಬಂಧುಗಳು ನಿಮ್ಮೊಂದಿಗೆ ಕೇವಲ ವ್ಯಾವಹಾರಿಕವಾಗಿ ನಡೆದುಕೊಳ್ಳುವರು ಇದರಿಂದ ನಿಮಗೆ ಬೇಸರವಾಗಲಿದೆ. ಸಜ್ಜನರ ಸೇವೆ ಮಾಡಿ ಅನ್ನದಾನ ಮಾಡಿ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಮತ್ತೊಬ್ಬರೊಂದಿಗೆ ಅತ್ಯಂತ ಕಠಿಣವಾಗಿ ನಡೆದುಕೊಳ್ಳಬೇಡಿ, ನೀವು ಎಷ್ಟೇ ಶ್ರಮಪಟ್ಟರೂ ಆದಾಯದ ಮೂಲವು ಹೆಚ್ಚಾಗಲಾರದು, ದಿನಸಿ ವ್ಯಾಪಾರಿಗಳಿಗೆ ಮಾರುಕಟ್ಟೆಯನ್ನು ಅರಿತುಕೊಳ್ಳುವುದೇ ತುಸು ಕಷ್ಟವಾಗಲಿದೆ. ಕ್ರಿಡಾಪಟುಗಳಿಗೆ ಉತ್ತಮ ತರಬೇತುದಾರರು ಸಿಗಲಿದ್ದು, ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ದೊರೆಯಲಿದೆ. ತೀರ್ಥಯಾತ್ರೆ ಮಾಡುವ ಯೋಗ ಬರಲಿದ್ದು, ಅತಿಯಾದ ಮೋಜು-ಮಸ್ತಿಗಳಿಂದ ಮತ್ತು ಭೋಜನ ಕೂಟಗಳಿಂದಾಗಿ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಲಿದೆ. ಹಿರಿಯರನ್ನು ಗೌರವಿಸಿ, ಗೋಗ್ರಾಸ ಕೊಡಿ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕುಸಿದಿದ್ದ ಆತ್ಮವಿಶ್ವಾಸವನ್ನು ಮತ್ತೆ ಹೆಚ್ಚಿಸಿಕೊಂಡು ಮುನ್ನುಗ್ಗುವಿರಿ, ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉದಾಸೀನತೆ ತೋರಿದಲ್ಲಿ ಮುಂದಿನ ಭವಿಷ್ಯ ಕರಾಳವಾಗಬಹುದು, ನರಸಂಬಂಧಿ ದೌರ್ಬಲ್ಯಗಳು ಹೆಚ್ಚಿ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಕಂಡುಬರಲಿದೆ, ಬಂಧುಗಳು ಸದಾ ನಿಮ್ಮ ನೆರವಿಗೆ ಬರಲಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಿ. ಆದಾಯವು ಮಧ್ಯಮ ಗತಿಯಲ್ಲಿರುವುದರಿಂದ ಅಲಂಕಾರಿಕ ವಸ್ತುಗಳ ಖರೀದಿಗೆ ಕೈಹಾಕದಿರುವುದೇ ಮೇಲು. ಆಸ್ತಿ ವಿಭಾಗದ ವಿಚಾರವನ್ನು ಸದ್ಯದ ಮಟ್ಟಿಗೆ ಮುಂದೂಡುವುದು ಉತ್ತಮ. ಕುಲದೇವತಾರಾಧನೆ ಮಾಡುವುದು ಮೇಲು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಪುರಾಣ ಪ್ರವಚನಕಾರರಿಗೆ ಮಠಮಾನ್ಯಗಳಿಂದ ಸನ್ಮಾನವಾಗಲಿದ್ದು, ಉತ್ತಮ ಅವಕಾಶಗಳಿಂದ ಆದಾಯ ಹೆಚ್ಚಲಿದೆ. ಸೋದರ ಅಥವಾ ಸೋದರಿಯೊಂದಿಗೆ ಮಾಡಿಕೊಳ್ಳುವ ವೈಮನಸ್ಯಗಳು ನಿಮ್ಮ ಪ್ರಗತಿಗೆ ಅಡ್ಡಯಾಗಲಿವೆ. ಶಸ್ತ್ರ ಚಿಕಿತ್ಸಕರಿಗೆ ಹಾಗೂ ದಂತವೈದ್ಯರಿಗೆ ದೇಶ-ವಿದೇಶಗಳಲ್ಲಿ ಬೇಡಿಕೆ ಹೆಚ್ಚಲಿದೆ ನಿರುದ್ಯೋಗಿ ಯುವಕರಿಗೆ ಸಾಧಾರಣ ವೇತನದ ನೌಕರಿ ಸಿಗಲಿದೆ. ಸರ್ಕಾರಿ ನೌಕರರಿಗೆ ಉದ್ಯೋಗ ನಿಮಿತ್ತ ದೂರದೂರುಗಳಲ್ಲಿ ತುಸು ಹೆಚ್ಚಿನ ಸಮಯ ಇರಬೇಕಾಗಬಹುದು.ಮತ್ತೊಬ್ಬರಿಗೆ ಕೊಟ್ಟ ಹಣವನ್ನು ಕೇಳದೇ ಹೋದಲ್ಲಿ ಮುಂದೆ ನೀವೇ ಸಾಲಗಾರರಾಗ ಬೇಕಾದೀತು. ರುದ್ರಾಭಿಷೇಕ ಮಾಡಿಸಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಆದಾಯ ಮಂದಾತಿ-ಮಂದಗತಿಯಲ್ಲಿರುವುದರಿಂದ ಮಹಿಳೆಯರು ಮನೆ ವಾರ್ತೆಯನ್ನು ಎಚ್ಚರದಿಂದ ನಿರ್ವಹಿಸಬೇಕಾದೀತು. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆಯಾಗಲಿದ್ದು, ಚಿಂತೆಗೀಡು ಮಾಡಲಿದೆ. ಲೇವಾದೇವಿ ವ್ಯವಹಾರದಲ್ಲಿ ಸಾಧಾರಣ ಎನ್ನಬಹುದಾದ ಲಾಭವಾಗಲಿದೆ, ಶಸ್ತ್ರಚಿಕಿತ್ಸಾ ವೈದ್ಯರಿಗೆ ಆದಾಯ ಹೆಚ್ಚಲಿದೆ. ವಿದೇಶದಲ್ಲಿರುವ ಮಗನು ಪರಿವಾರ ಸಮೇತ ಬರಲಿದ್ದು. ಮನೆಯಲ್ಲಿ ಹಬ್ಬದ ವಾತಾ ವರಣ ಮೂಡಲಿದೆ. ಸಿನಿಮಾ ನಟ ನಟಿಯರಿಗೆ ಆದಾಯ ಇಲಾಖೆಯಿಂದ ತಪಾಸಣೆ ಯಾಗಲಿದೆ, ಸಾಕು ಪ್ರಾಣಿಗಳನ್ನು ಸೂಕ್ಷ್ಮವಾಗಿ ನೋಡಿಕೊಳ್ಳಿ. ಭಾನು-ಸೋಮ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 29.01.2025ನೇ ಬುಧವಾರ ಅಮಾವಾಸೆ, ಪುರಂದರದಾಸರ ಪುಣ್ಯತಿಥಿ.**

# ದುಶ್ಚಟಗಳಿಂದ ಹೊರ ಬಂದು ಡ್ರಗ್ಸ್ ಮುಕ್ತ ಸಮಾಜಕ್ಕೆ ಕೈ ಜೋಡಿಸಿ

## ಡ್ರಗ್ಸ್ ಫ್ರೀ ಸೈಕಲ್ ರ್‍ಯಾಲಿಗೆ ಚಾಲನೆ ನೀಡಿದ ಜಿ.ಎಂ. ಗಂಗಾಧರ ಸ್ವಾಮಿ



ದಾವಣಗೆರೆ, ಜ.26- ಜನರು ದುಶ್ಚಟಗಳಿಂದ ಹೊರ ಬಂದು ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ನಗರದ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಶಾಲೆ ವತಿಯಿಂದ ಶನಿವಾರ ಏರ್ಪಡಿಸಿದ್ದ ಡ್ರಗ್ಸ್ ಫ್ರೀ ಸೈಕಲ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಒಳ್ಳೆಯ ಪ್ರಜೆಗಳಾಗಿ ದೇಶಕ್ಕೆ ಆಸ್ತಿಯಾಗಬೇಕು. ಈ ನಿಟ್ಟಿನಲ್ಲಿ ಒಳ್ಳೆಯ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಕೇವಲ ಓದುವುದಷ್ಟೇ ಒಳ್ಳೆಯ ಅಭ್ಯಾಸವಲ್ಲ. ಸಂಸ್ಕೃತಿ, ವಿನಯವೂ ಉತ್ತಮ ನಡುವಳಿಕೆ ಆಗಿದೆ. ವಿದ್ಯೆಯಿಂದ ವಿನಯ, ಸಂಸ್ಕೃತಿ ಮೈಗೂಡಲಿದೆ. ವಿದ್ಯೆ ಕಲಿಯದಿದ್ದರೆ ಜೀವನವೇ ವ್ಯರ್ಥವಾಗಲಿದೆ. ಮೊಬೈಲ್ ಬಳಕೆಯೂ ದುಶ್ಚಟವೇ ಆಗಿದ್ದು, ಅದನ್ನು ಅವಶ್ಯಕತೆಗೆ ತಕ್ಕಷ್ಟು ಮಾತ್ರ ಬಳಸಬೇಕು ಎಂದರು.

ಮಾದಕ ವಸ್ತುಗಳ ವಿರುದ್ಧ ಜಾಗೃತಿಗಾಗಿ ಸೈಕಲ್ ರ್‍ಯಾಲಿ ಆಯೋಜಿಸಿರುವ ಶಾಲೆಯ ಕಾರ್ಯ ಶ್ಲಾಘನೀಯ. ಇಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಸಹ ಈ ಜಿಲ್ಲೆಗೆ ಮಾದರಿಯಾಗಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಯುವ ಜನತೆ ಮಾದಕ ವಸ್ತುಗಳನ್ನು ಸೇವಿಸಬಾರದು. ನಿಮ್ಮ ಸಹಪಾಠಿಗಳು ಯಾರಾದರೂ ಸೇವಿಸಿದರೂ ಉಪನ್ಯಾಸಕರು ಮತ್ತು ಪ್ರಾಚಾರ್ಯರಿಗೆ ಮಾಹಿತಿ ನೀಡಬೇಕು. ಮಾದಕ ವ್ಯಸನಿಗಳಲ್ಲಿ ಅದರಿಂದಾಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಮಾದಕ ವಸ್ತುವನ್ನು ಸೇವಿಸುವುದರಿಂದ ಬೇರೆ ಪ್ರಪಂಚಕ್ಕೆ ಹೋದಂತಾಗುತ್ತದೆ ಎಂಬ ಭ್ರಮೆಯಿಂದ ದುಶ್ಚಟಕ್ಕೆ ಜನರು ಬಲಿಯಾಗುತ್ತಿದ್ದಾರೆ. ಅಂತಹ ಪ್ರಯೋಗ ಯಾರೂ ಮಾಡಬಾರದು. ಒಮ್ಮೆ ದುಶ್ಚಟಕ್ಕೆ ದಾಸರಾದರೆ ಮತ್ತೆ ವಾಪಸ್ ಬರಲಾಗಲ್ಲ. ಬಳಿಕ ನಿಮ್ಮ ತಂದೆ-ತಾಯಿ ಕಷ್ಟ ಪಡಬೇಕಾಗುತ್ತದೆ. ಆದ್ದರಿಂದ ಮಾದಕ ವಸ್ತುಗಳಿಂದ ದೂರ ಉಳಿಯಬೇಕು ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಛೇರ್‌ಮನ್ ಎಚ್.ಮಹಾಲಿಂಗಪ್ಪ, ಟ್ರಸ್ಟಿ ಪುಷ್ಪಾ ಮಹಾಲಿಂಗಪ್ಪ, ಡೀನ್ ಸಿಲ್ವಿ ಜೋಸ್, ಪ್ರಾಚಾರ್ಯ ಬಿ.ಆರ್. ಅಶೋಕ್ ಮತ್ತಿತರರಿದ್ದರು.

# ಆಂಧ್ರದಲ್ಲಿ ಹೊಸ ಜನಸಂಖ್ಯಾ ನೀತಿಗೆ ನಿರ್ಧಾರ

## ಕುಟುಂಬಗಳು ಹೆಚ್ಚು ಮಕ್ಕಳು ಹೊಂದುವಂತೆ ಮಾಡುವ ಗುರಿ

ಅಮರಾವತಿ, ಜ. 26- ಉದ್ಯೋಗಸ್ಥರ ವಯೋಮಾನದಲ್ಲಿರುವ ಜನಸಂಖ್ಯೆ ಕುಸಿಯುತ್ತಿರುವುದರಿಂದ ಆಗುತ್ತಿರುವ ಪರಿಣಾಮಗಳನ್ನು ಎದುರಿಸಲು ಹೊಸ ಜನಸಂಖ್ಯಾ ನೀತಿ ರೂಪಿಸಲು ಆಂಧ್ರಪ್ರದೇಶ ಸರ್ಕಾರ ನಿರ್ಧರಿಸಿದೆ.

ಗಣರಾಜ್ಯೋತ್ಸವ ಸಂದರ್ಭದಲ್ಲಿ ಈ ಬಗ್ಗೆ ಮಾತನಾಡಿರುವ ರಾಜ್ಯಪಾಲ ಎಸ್. ಅಬ್ದುಲ್ ನಜೀರ್, ರಾಜ್ಯದಲ್ಲಿ ಫಲವತ್ತತೆ ದರ ತೀವ್ರವಾಗಿ ಕುಸಿಯುತ್ತಿದೆ. ಇದರಿಂದಾಗಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ ಹಾಗೂ ಜಂಟಿ ಕುಟುಂಬ ವ್ಯವಸ್ಥೆಯ ಸಂಪ್ರದಾಯ ಕರಗುತ್ತಿದೆ. ಇದರಿಂದ ದೂರಗಾಮಿ ಪರಿಣಾಮಗಳು ಉಂಟಾಗಲಿವೆ ಎಂದಿದ್ದಾರೆ.

ಕುಸಿಯುತ್ತಿರುವ ದುಡಿಯುವ ಜನರ ಪ್ರಮಾಣ, ಹೆಚ್ಚುತ್ತಿರುವ ವೃದ್ಧರು ಹಾಗೂ ಬದಲಾಗುತ್ತಿರುವ ಕೌಟುಂಬಿಕ ಸ್ವರೂಪದ ಕಾರಣದಿಂದಾಗಿ ಆಗುತ್ತಿರುವ ಪರಿಣಾಮಗಳನ್ನು ಎದುರಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಜನಸಂಖ್ಯಾ ನೀತಿ ಒಂದನ್ನು ರೂಪಿಸಲಾಗುವುದು ಎಂದವರು ಹೇಳಿದ್ದಾರೆ.

ಫಲವತ್ತತೆ ದರ ಕುಸಿಯುತ್ತಿರುವುದರಿಂದ ಆಗುವ ಪರಿಣಾಮಗಳನ್ನು ಹಲವು ದೇಶಗಳು ಎದುರಿಸುತ್ತಿವೆ. ಈ ಬಿಕ್ಕಟ್ಟಿನಿಂದ ಹೊರ ಬರಲು ರಾಜ್ಯ ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಸಾರ್ವಜನಿಕರ ಜೊತೆ ಸಂವಾದ ನಡೆಸಲಾಗುವುದು ಎಂದು ನಜೀರ್ ಹೇಳಿದ್ದಾರೆ.

ಆರೋಗ್ಯ ಸೇವೆಯಲ್ಲಿ ಹೂಡಿಕೆ, ಸಾಮಾಜಿಕ ಭದ್ರತಾ ಯೋಜನೆಗಳ ಜಾರಿ ಹಾಗೂ ಸಮುದಾಯ ಆಧಾರಿತ ಬೆಂಬಲ ವ್ಯವಸ್ಥೆ ಸೇರಿದಂತೆ ನೂತನ ಜನಸಂಖ್ಯಾ ನೀತಿಗಾಗಿ ಬಹುಮುಖಿ ಮಾರ್ಗಸೂಚಿ ರೂಪಿಸಲಾಗುವುದು ಎಂದವರು ಹೇಳಿದ್ದಾರೆ.

# ಜಿಲ್ಲಾಡಳಿತ ಭವನದಲ್ಲಿ ಸಾರ್ವಜನಿಕರ ವಾಚನಾಲಯದ ಉದ್ಘಾಟನೆ



ದಾವಣಗೆರೆ, ಜ. 26 - ನಗರದ ಜಿಲ್ಲಾಡಳಿತ ಭವನದಲ್ಲಿ ಸಾರ್ವಜನಿಕರಿಗಾಗಿ ಸ್ಥಾಪಿಸಲಾಗಿರುವ ವಾಚನಾಲಯದ ಉದ್ಘಾಟನೆಯನ್ನು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಭಾನುವಾರ ನೆರವೇರಿಸಿದರು. ಈ ವೇಳೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಜಿ.ಪಂ ಸಿಇಒ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ್ ಮತ್ತಿತರರಿದ್ದರು.

# ಭಾನುವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಮಲೇಬೆನ್ನೂರು,ಜ.26- ಭಾನುವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಎಲ್ಲಾ 12 ಸ್ಥಾನಗಳಿಗೂ ಗ್ರಾಮಸ್ಥರು ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದ್ದಾರೆ.

ಸಾಲಗಾರರ ಕ್ಷೇತ್ರದಿಂದ ಸಾಮಾನ್ಯ ವರ್ಗದ ಎಸ್.ಎನ್.ಬಸವರಾಜಪ್ಪ, ಬಿ. ಜಯ್ಯಪ್ಪ, ಕೆ.ಮಹೇಶಪ್ಪ, ಡಿ.ಹೆಚ್.ಬಸವರಾಜಪ್ಪ, ಪಿ.ಗುಡ್ಡಪ್ಪ, ಎಸ್ಸಿ ಮೀಸಲು ವರ್ಗದ ಬಿ.ಎಸ್.ಸದಾನಂದಪ್ಪ, ಎಸ್ಟಿ ಮೀಸಲು ವರ್ಗದ ಟಿ.ರಂಗಪ್ಪ, ಬಿಸಿಎಂ 'ಎ'ವರ್ಗದ ಎನ್. ಜಿ.ಹನುಮಂತಪ್ಪ, ಬಿಸಿಎಂ 'ಬಿ' ವರ್ಗದ ಬಿ. ವೀರೇಶ್, ಮಹಿಳಾ ಮೀಸಲು ವರ್ಗದ ವನಜಾಕ್ಷಮ್ಮ ಕುಬೇರಪ್ಪ, ಬಲ್ಕೀಶ್ ಬಾನು ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಮಹಬೂಬ್ ಸಾಬ್, ಬಲ್ಲೂರು ಮಹೇಂದ್ರ ಇವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಇಲಾಖೆಯ ಶ್ರೀಮತಿ ಉಷಾದೇವಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು ಎಂದು ಸಂಘದ ಸಿಇಓ ಈರಪ್ಪ ತಿಳಿಸಿದ್ದಾರೆ.

# ಸಂವಿಧಾನದ ಮಹತ್ವ ಸಾರುವ ಬ್ಯಾಡ್ಜ್ ಧರಿಸಿದ ಸಚಿವರು, ಸಂಸದರು



ದಾವಣಗೆರೆ. ಜ. 26 - ಜಿಲ್ಲಾಡಳಿತದಿಂದ ಭಾನುವಾರ ಏರ್ಪಾಡಾಗಿದ್ದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಂವಿಧಾನದ ಮಹತ್ವ ಸಾರುವ ಸಂವಿಧಾನದ ಪೀಠಿಕೆಯ ಬ್ಯಾಡ್ಜ್ ಧರಿಸುವ ಮೂಲಕ ಗಮನ ಸೆಳೆದರು.

ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯದ ಮೂರ್ತ ಸ್ವರೂಪ ಹಾಗೂ ದೇಶದ ಐಕ್ಯತೆಯ ಪ್ರತೀಕವಾದ ನಮ್ಮ ಸಂವಿಧಾನದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಸಚಿವರು ಹಾಗೂ ಸಂಸದರು ಗಮನ ಸೆಳೆದಿದ್ದು ವಿಶೇಷವಾಗಿತ್ತು.

# ಜಿ.ಎಸ್. ಅನಿತ್‌ಕುಮಾರ್ ಅವರಿಗೆ ಗ್ಲೋಬಲ್ ಅಚೀವರ್ಸ್ ಅವಾರ್ಡ್



ದಾವಣಗೆರೆ, ಜ. 26 - ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಪ್ರತಿವರ್ಷ ವಿಶ್ವವಾಣಿಯು 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ನೀಡಲಾಗುತ್ತಿದ್ದು, ಈ ಬಾರಿಯ ಪ್ರಶಸ್ತಿಗೆ ವಾಣಿಜ್ಯೋದ್ಯಮಿ, ಬಿಜೆಪಿ ಯುವ ಮುಖಂಡ ಜಿ.ಎಸ್. ಅನಿತ್‌ಕುಮಾರ್ ಆಯ್ಕೆಯಾಗಿದ್ದಾರೆ.

ಓಮನ್ ರಾಜಧಾನಿ ಮಸ್ಕತ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಅನಿತ್‌ಕುಮಾರ್ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ರಾಜಕೀಯವಾಗಿ ತಾತಾ ದಿ. ಜಿ. ಮಲ್ಲಿಕಾರ್ಜುನಪ್ಪ, ತಂದೆ - ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಗರಡಿಯಲ್ಲಿ ಪಳಗಿರುವ ಅನಿತ್‌ಕುಮಾರ್ ಬಿಜೆಪಿಯ ಭರವಸೆಯ ನಾಯಕರು.

ಜಿ.ಮಲ್ಲಿಕಾರ್ಜುನಪ್ಪ ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಶನ್ ಮೂಲಕ ಹಲವಾರು ಸಾಮಾಜಿಕ ಕಾರ್ಯ ಮಾಡುತ್ತಾ ಬಂದಿದ್ದಾರೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ಚಿತ್ರದುರ್ಗ, ಹರಿಹರ, ಹರಪನಹಳ್ಳಿ ತಾಲ್ಲೂಕು ಆಸ್ಪತ್ರೆಗೆ 1.89 ಕೋಟಿ ರೂ. ಮೊತ್ತದ ಆಕ್ಸಿಜನ್ ಪ್ಲಾಂಟ್, ಬಡವರಿಗೆ ತಮ್ಮ ಟ್ರಸ್ಟ್ ಮೂಲಕ ಸಾವಿರಾರು ಉಚಿತ ರೇಷನ್ ಕಿಟ್, ಲಕ್ಷಾಂತರ ಫೇಸ್ ಮಾಸ್ಕ್ ಮತ್ತು ಸ್ಯಾನಿಟೈಸರ್ ಬಾಟಲ್ ನೀಡಿ ಕೋವಿಡ್ ಸಂಕಷ್ಟದಿಂದ ಜನರನ್ನು ಪಾರು ಮಾಡಿದವರು.

ಜಿಎಂ ಗ್ರೂಪ್ ನಿರ್ದೇಶಕರಾಗಿ, ಭೀಮ ಸಮುದ್ರದ ಶ್ರೀಶೈಲ ಎಜುಕೇಷನ್ ಟ್ರಸ್ಟ್ ಖಜಾಂಜಿಯಾಗಿ, ಜಿ. ಮಲ್ಲಿಕಾರ್ಜುನಪ್ಪ, ಶ್ರೀಮತಿ ಹಾಲಮ್ಮ ಚಾರಿಟಿ ಫೌಂಡೇಷನ್ ಟ್ರಸ್ಟಿಯಾಗಿ, ಭೀಮ ಸಮುದ್ರ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಅವರ ಸೇವೆ ಸಲ್ಲಿಸುತ್ತಿದ್ದಾರೆ.

## ಗ್ಯಾರಂಟಿಯಿಂದ ಆರ್ಥಿಕ ಸಬಲತೆ

**(3ನೇ ಪುಟದಿಂದ)** ಮಲ್ಲಿಕಾರ್ಜುನ್, ಪಾಲಿಕೆ ಮೇಯರ್ ಕೆ. ಚಮನ್‌ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ್ , ಉಪಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ, ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ರವಿಕಾಂತೇಗೌಡ, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ., ಎಸ್ಪಿ ಉಮಾ ಪ್ರಶಾಂತ್, ಜಿ.ಪಂ ಸಿಇಒ ಸುರೇಶ್ ಬಿ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಮತ್ತಿತರರಿದ್ದರು.

## ಇಂದು ರೆಡ್‌ಕ್ರಾಸ್ ಸಂಸ್ಥೆ ಸಭೆ

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆಯ 2021-22, 22-23 ಹಾಗೂ 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಜಿಲ್ಲಾಧಿಕಾರಿ ಜಿ. ಎಂ. ಗಂಗಾಧರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಐಎಂಎ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಸಭಾಪತಿ ಡಾ. ಎ.ಎಂ. ಶಿವಕುಮಾರ ಹಾಗೂ ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕು ಕ್ಯಾಸಿನಕೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಕ್ರೀಡಾ ಶಾಲೆ, ನಿಲಯಗಳಿಗೆ ಆಯ್ಕೆ

ದಾವಣಗೆರೆ, ಜ. 26 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದ ವಿವಿಧ ಸ್ಥಳಗಳಲ್ಲಿ ನಡೆಸುತ್ತಿರುವ ಕ್ರೀಡಾಶಾಲೆ ಹಾಗೂ ಕ್ರೀಡಾ ನಿಲಯಗಳಿಗೆ ಪ್ರತಿಭಾವಂತ ಕ್ರೀಡಾ ಪಟುಗಳನ್ನು ಗುರುತಿಸಿ, ವಿವಿಧ ಹಂತಗಳಲ್ಲಿ ಆಯ್ಕೆಯನ್ನು ನಡೆಸಿ, ಕ್ರೀಡಾ ಶಾಲೆ, ನಿಲಯಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.

ಆಯ್ಕೆ ನಡೆಯುವ ಸ್ಥಳ ಮತ್ತು ದಿನಾಂಕ: ಜ. 27 ರಂದು ತಾಲ್ಲೂಕು ಕ್ರೀಡಾಂಗಣ, ಹರಿಹರ ಮೊ.ಸಂ: 94486 67255, ಜ.28 ರಂದು ತಾಲ್ಲೂಕು ಕ್ರೀಡಾಂಗಣ, ಹೊನ್ನಾಳಿ, ಮೊ.ಸಂ: 78926 41492, ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನ, ನ್ಯಾಮತಿ ಮೊ.ಸಂ: 9480796263, ಜ.29 ರಂದು ತಾಲ್ಲೂಕು ಕ್ರೀಡಾಂಗಣ, ಚನ್ನಗಿರಿ ಮೊ. ಸಂ: 9480796263, ಜ.29 ರಂದು ಬೇಡರ ಕಣ್ಣಪ್ಪ ಪ್ರೌಢ ಶಾಲಾ ಮೈದಾನ, ಜಗಳೂರು, ಮೊ.ಸಂ: 9972464313, ಜ.31 ರಂದು ಜಿಲ್ಲಾ ಮಟ್ಟದ ಆಯ್ಕೆ ದಾವಣಗೆರೆ ಜಿಲ್ಲಾ ಕ್ರೀಡಾಂಗಣ ಹಾಗೂ ಜಿಲ್ಲಾ ಕ್ರೀಡಾ ವಸತಿ ಶಾಲೆಗೆ ಪ್ರವೇಶ ಪಡೆಯಲಿಚ್ಚಿಸುವ ಕುಸ್ತಿ ಮತ್ತು ಖೋ-ಖೋ ಕ್ರಿಡೆಗಳಿಗೆ 11 ವರ್ಷದೊಳಗಿನ ಬಾಲಕರ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಮೊ.ಸಂ: 9448667255, 9480796263, 9972464313, 9141091590

ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ತಾಲ್ಲೂಕಿನ ಅಧಿಕಾರಿಗಳ ಮೊಬೈಲ್ ಸಂಖ್ಯೆಯನ್ನು ಅಥವಾ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಕಚೇರಿ ದೂ.ಸಂ: 08192-237480 ಸಂಪರ್ಕಿಸಲು ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ರಾಷ್ಟ್ರೀಯ ಹಬ್ಬಗಳು ಸರ್ಕಾರಿ ಆಚರಣೆಗೆ ಸೀಮಿತ

## ಹಿಂದೂ ಜಾಗರಣಾ ವೇದಿಕೆಯ ದಕ್ಷಿಣ ಕ್ಷೇತ್ರೀಯ ಸಂಯೋಜಕ ಜಗದೀಶ್ ಕಾರಂತ್ ಬೇಸರ



ದಾವಣಗೆರೆ, ಜ.26- ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವದಂತಹ ರಾಷ್ಟ್ರೀಯ ಹಬ್ಬಗಳು ಕೂಡ ಸರ್ಕಾರಿ ಆಚರಣೆಗೆ ಸೀಮಿತವಾಗಿರುವುದು ದುರಂತ ಎಂದು ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಕ್ಷೇತ್ರೀಯ ಸಂಯೋಜಕ ಜಗದೀಶ್ ಕಾರಂತ್ ಬೇಸರ ವ್ಯಕ್ತಪಡಿಸಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭಾನುವಾರ ಸಂಜೆ ಭಾರತ ವಿಕಾಸ ಪರಿಷದ್, ಸ್ವಾಮಿ ವಿವೇಕಾನಂದ ಶಾಖೆ ವತಿಯಿಂದ ಭಾರತ ಮಾತಾ ಪೂಜನ ನಿಮಿತ್ತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸವಾಲುಗಳು ಮತ್ತು ಜನಜಾಗೃತಿ ಎಂಬ ವಿಷಯವಾಗಿ ಅವರು ಉಪನ್ಯಾಸ ನೀಡಿದರು.

ರಾಷ್ಟ್ರೀಯ ಹಬ್ಬಗಳಲ್ಲಿ ಜನರು ಸಂಭ್ರಮದಿಂದ ಪಾಲ್ಗೊಳ್ಳುವ ವಾತಾವರಣ ಕಡಿಮೆ ಇದೆ. ನಿರಂತರ ರಜೆ ಬಂದರಂತೂ ಬಂಧು-ಮಿತ್ರರೊಂದಿಗೆ ಪ್ರವಾಸ ಹೋಗುವುದು ಸಾಮಾನ್ಯವಾಗಿದೆ. ಸಮಾಜಕ್ಕೊಂದು ಸೂಕ್ತ ದಿಕ್ಕು-ದೆಸೆ, ಮೇಲ್ಪಂಕ್ತಿ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ ಎಂದರು.

ಇತಿಹಾಸ ವಿಸ್ಮೃತಿ ಹಾಗೂ ದೇಶದ ಬಗೆಗಿನ ನಿರಭಿಮಾನದಿಂದಾಗಿ ರಾಷ್ಟ್ರೀಯ ಹಬ್ಬಗಳು ಸರ್ಕಾರಿ ಆಚರಣೆಗಳಾಗಿ ಸೀಮಿತವಾಗಿದ್ದು, ಸಾರ್ವಜನಿಕ ಸಹಭಾಗಿತ್ವ ಇಲ್ಲವಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಹಬ್ಬಗಳಂದು ಬರೀ ಗಾಂಧಿಗಳಿಗೆ ಜೈಕಾರ ಕೇಳಿಬರುತ್ತದೆ. ನೇತಾಜಿ ಸುಭಾಷ್ ಚಂದ್ರ ಬೋಸ್, ವೀರ ಸಾವರ್ಕರ್ ಹೆಸರೇ ಕೇಳುವುದಿಲ್ಲ. ಇದಕ್ಕಿಂತ ದೊಡ್ಡ ದ್ರೋಹ ಇನ್ನೊಂದಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು ಹೋರಾಟದಿಂದಲೇ ಹೊರತು ಭಿಕ್ಷೆಯಿಂದಲ್ಲ. ಲಕ್ಷಾಂತರ ದೇಶಭಕ್ತರು ಇದಕ್ಕಾಗಿ ತ್ಯಾಗ, ಬಲಿದಾನ ಮಾಡಿದ್ದಾರೆ. ಇದನ್ನೆಲ್ಲಾ ಮುಚ್ಚಿಟ್ಟು, ಕೆಲವೇ ವ್ಯಕ್ತಿಗಳಿಂದ ಸ್ವಾತಂತ್ರ್ಯ ಬಂದಿದೆ ಎಂಬ ಸುಳ್ಳನ್ನು ಹರಡಲಾಗಿದೆ. ಹೀಗಾಗಿ ಇಂದಿನ ಯುವಪೀಳಿಗೆಗೆ ಸ್ವಾತಂತ್ರ್ಯದ ಮಹತ್ವ ಗೊತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಗಾಂಧಿಯಿಂದಲೇ ಸ್ವಾತಂತ್ರ್ಯ ಹೋರಾಟ ಆರಂಭವಾಗಿಲ್ಲ. ಭಾರತದಂತೆ ದೀರ್ಘಕಾಲ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರ ಜಗತ್ತಿನಲ್ಲಿ ಮತ್ತೊಂದಿಲ್ಲ. ಇಸ್ಲಾಂ ಕಾಲಿಟ್ಟ ಕಡೆಗೆಲ್ಲ ಅಲ್ಲಿನ ನೆಲ, ನಾಗರಿಕತೆ ಸಂಪೂರ್ಣ ನಾಶವಾಗಿವೆ. ಆದರೆ ನೂರಾರು ವರ್ಷಗಳ ಇಸ್ಲಾಮೀ ಆಕ್ರಮಣದ ನಡುವೆಯೂ ಜೀವಂತವಾಗಿ ಉಳಿದಿರುವ ಏಕೈಕ ಸಮಾಜ ನಮ್ಮದು. ಇಂತಹ ವೀರ ಪರಂಪರೆಯವರನ್ನು ಹೇಡಿಗಳಂತೆ ಬಿಂಬಿಸುವ ಪ್ರಯತ್ನ ಸ್ವಾತಂತ್ರ್ಯ ಪೂರ್ವದಿಂದಲೂ ನಡೆದಿದೆ. ಈ ಸಮಾಜ ಹೇಡಿಯಾಗಿದ್ದರೆ ದೇಶಕ್ಕೆ ಸ್ವಾತಂತ್ರ್ಯವೇ ಸಿಗುತ್ತಿರಲಿಲ್ಲ ಎಂಬುದನ್ನು ಯಾರೂ ಮರೆಯಬಾರದು ಎಂದು ಅವರು ಸಲಹೆ ನೀಡಿದರು.

ಭಾರತ ವಿಕಾಸ ಪರಿಷದ್, ಸ್ವಾಮಿ ವಿವೇಕಾನಂದ ಶಾಖೆ ಅಧ್ಯಕ್ಷ ಎನ್.ಪಿ. ಮೌನೇಶಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಗನೂರು ಬಸಪ್ಪ ಪಿಯು ಕಾಲೇಜು ಪ್ರಾಂಶುಪಾಲ ಪ್ರಸಾದ್‌ಎಸ್. ಬಂಗೇರ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ಹೆಚ್.ಜಯಣ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ನಗರದಲ್ಲಿ ಇಂದು

ಕರ್ನಾಟಕ ಡ್ರೈವರ್ ಸಮುದಾಯದ ಪರಿವರ್ತನೆ ಮತ್ತು ಅವರ ವ್ಯವಹಾರಗಳ ಡಿಜಿಟಲೀಕರಣಕ್ಕೆ ಸಹಕರಿಸುವ ಟೌನರ್ ಮತ್ತು ಓಐಓಟಿ ಆ್ಯಪ್‌ಗಳ ಅಧಿಕೃತ ಸೇವೆಯ ಪ್ರಾರಂಭದ ಕಾರ್ಯಕ್ರಮವು ಇಂದು ಬೆಳಿಗ್ಗೆ 11ಕ್ಕೆ ವಿದ್ಯಾರ್ಥಿ ಭವನ ಸಮೀಪವಿರುವ ಟ್ಯಾಕ್ಸಿ ನಿಲ್ದಾಣದ ಬಳಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಎಸ್ಪಿ ಉಮಾ ಪ್ರಶಾಂತ್ ಪಾಲ್ಗೊಳ್ಳಲಿದ್ದಾರೆ.

**ಮನೆ ಬಾಡಿಗೆಗೆ ಇದೆ**

ಗ್ರೌಂಡ್ ಫ್ಲೋರ್, 3 BHK, 2 ಅಟ್ಯಾಚ್ಡ್ ಬಾತ್ ರೂಂ. ಡೋ. ನಂ. 3663, 17ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ಬಾಪೂಜಿ ಹೈಸ್ಕೂಲ್ ಹತ್ತಿರ, ದಾವಣಗೆರೆ.

ಸಂಪರ್ಕಿಸಿ :

**99862 18555**
**98454 56934**




# ದಿ ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., ಹರಿಹರ.

ಮುಂದಿನ ಐದು ವರ್ಷಗಳ ಅವಧಿಗೆ ದಿನಾಂಕ : 18.01.2025 ರಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ
**ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮತ್ತು ನಿರ್ದೇಶಕರುಗಳಿಗೆ** ನಮ್ಮ ಹೃದಯಪೂರ್ವ ಅಭಿನಂದನೆಗಳು.
ಹಾಗೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಸರ್ವ ಷೇರುದಾರರಿಗೆ ಮತ್ತು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ
**ಹೆಚ್.ಸುನೀತಾ** ರವರಿಗೂ ಹಾಗೂ ಸಹಕಾರಿ ಬಂಧುಗಳಿಗೂ ಮತ್ತು ಪ್ರತ್ಯಕ್ಷ- ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ
**ನಮ್ಮ ಹೃದಯಪೂರ್ವಕ ಧನ್ಯವಾದಗಳು.**




**ಶ್ರೀ ಡಿ. ಹೇಮಂತರಾಜ್**
ಅಧ್ಯಕ್ಷರು, ಹರಿಹರ.


**ಶ್ರೀ ಎಂ. ಶಿವಾನಂದಪ್ಪ**
ಸಂ.ಅಧ್ಯಕ್ಷರು, ಹಾಲಿ ನಿರ್ದೇಶಕರು, ಹರಿಹರ.


**ಶ್ರೀ ಜಿ.ಎಸ್. ಚನ್ನಬಸಪ್ಪ**
ನಿರ್ದೇಶಕರು, ಹರಿಹರ.


**ಶ್ರೀ ಆರ್.ಕೆ. ಮಂಜುನಾಥ್**
ನಿರ್ದೇಶಕರು, ಹರಿಹರ.


**ಶ್ರೀ ಬಿ. ಮಂಜಪ್ಪ**
ನಿರ್ದೇಶಕರು, ಹರಿಹರ.


**ಶ್ರೀ ಕೆ.ಬಿ. ಮಂಜುನಾಥ್**
ಉಪಾಧ್ಯಕ್ಷರು, ಹರಿಹರ.


**ಶ್ರೀ ಎಂ. ಹನುಮಂತಪ್ಪ**
ನಿರ್ದೇಶಕರು, ಹರಿಹರ.


**ಶ್ರೀ ಪಿ. ಶಿವಣ್ಣ**
ನಿರ್ದೇಶಕರು, ಹಲಸಬಾಳು.


**ಶ್ರೀ ಜಿ.ಎನ್. ಜಗನ್ನಾಥ್**
ನಿರ್ದೇಶಕರು, ಹರಿಹರ.


**ಶ್ರೀ ಮಕ್ಬೂಲ್ ಮುಲ್ಲಾ**
ನಿರ್ದೇಶಕರು, ಹರಿಹರ.


**ಶ್ರೀಮತಿ ಎನ್. ಜಯಮ್ಮ**
ನಿರ್ದೇಶಕರು, ಹರಿಹರ.


**ಶ್ರೀಮತಿ ಎ.ಬಿ.ಗಂಗಮ್ಮ**
ನಿರ್ದೇಶಕರು, ಹರಿಹರ.


**ಶ್ರೀಮತಿ ಎಸ್. ಕುಸುಮ**
ನಿರ್ದೇಶಕರು, ಹರಿಹರ.

**ದಿ ತುಂಗಭದ್ರಾ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿಮಿಟೆಡ್‌ನ ಸಿಬ್ಬಂದಿಗಳು ಮತ್ತು ಪಿಗ್ಮಿ ಸಂಗ್ರಾಹಕರು**


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas